ಕರ್ನಾಟಕ ಸರ್ಕಾರ

# ಕರ್ನಾಟಕ ಕೃಷಿ ಬೆಲೆ ಆಯೋಗ

(Karnataka Agriculture Price Commission)

(ಆದೇಶ ಸಂಖ್ಯೆ: ಕೃಇ61ಕೃಎಇ2013, ಬೆಂಗಳೂರು, ದಿ: 31/01/2014)

ಮತ್ತು

IIPM

## ಭಾರತೀಯ ತೋಟಗಾರಿಕೆ ವ್ಯವಸ್ಥಾಪಕ ಸಂಸ್ಥೆ

(Indian Institute of Plantation Management-IIPM)

# ಉತ್ಪಾದನಾ ವೆಚ್ಚ ಲೆಕ್ಕಾಚಾರ ಹಾಗೂ ಆಧುನಿಕ ಮಾರುಕಟ್ಟೆ ವಿಧಗಳು

ರೈತ ಸಹಾಯ ಕೈಪಿಡಿ

ಆಗಸ್ಟ್ 2017



# ಕರ್ನಾಟಕ ಕೃಷಿ ಬೆಲೆ ಆಯೋಗದ ತಂಡ

| | | |
|---|---|---|
| 1. | **ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿ** | **ಅಧ್ಯಕ್ಷರು** |
| 2. | ಶ್ರೀ. ಹನುಮನಗೌಡ ಬೆಳಗುರ್ಕಿ, ರೈತ ಪ್ರತಿನಿಧಿ | ಸದಸ್ಯರು |
| 3. | ಶ್ರೀ. ಎಂ.ಮಹೇಶ್ವರ್ ರಾವ್, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ | ಸದಸ್ಯರು |
| 4. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ | ಸದಸ್ಯರು |
| 5. | ಆಯುಕ್ತರು, ಕೃಷಿ ಇಲಾಖೆ | ಖಾಯಂ ಆಹ್ವಾನಿತರು |
| 6. | ನಿರ್ದೇಶಕರು, ಕೃಷಿ ಮಾರುಕಟ್ಟೆ ಇಲಾಖೆ | ಖಾಯಂ ಆಹ್ವಾನಿತರು |
| 7. | ನಿರ್ದೇಶಕರು, ತೋಟಗಾರಿಕೆ ಇಲಾಖೆ | ಖಾಯಂ ಆಹ್ವಾನಿತರು |
| 8. | ಆಯುಕ್ತರು, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ | ಖಾಯಂ ಆಹ್ವಾನಿತರು |
| 9. | ಶ್ರೀ. ಬಿ.ವೈ. ಶ್ರೀನಿವಾಸ್, ನಿರ್ದೇಶಕರು, ಕೃಷಿ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |
| 10. | ಡಾ. ಕೆ. ವಿ. ಮಹಾಬಲಗಿರಿಭಟ್, ಮುಖ್ಯ ಪ್ರಧಾನ ವ್ಯವಸ್ಥಾಪಕರು (ನಿವೃತ್ತ) ರಾಜ್ಯ ಕೃಷಿ ಮಾರಾಟ ಮಂಡಳಿ | ವಿಶೇಷ ಆಹ್ವಾನಿತರು |
| 11. | ಡಾ. ಎನ್. ವಿ. ಕಮಲಾ, ಉಪ ಕೃಷಿ ನಿರ್ದೇಶಕರು | ತಾಂತ್ರಿಕ ಅಧಿಕಾರಿಗಳು |

## ತಾಂತ್ರಿಕ ಸಿಬ್ಬಂದಿ

ತಾಂತ್ರಿಕ ಸಲಹೆಗಾರರು

ಡಾ. ಕೆ. ಜೆ. ಪರಮೇಶ್ವರಪ್ಪ
ಡಾ. ಕೆ.ಎಸ್. ಜನಾರ್ಧನ್

ತಾಂತ್ರಿಕ ಸಹಾಯಕರು

ಕು. ಶಿಲ್ಪಶ್ರೀ ಜಿ.ಎಸ್.
ಕು. ವಾಣಿ ಎನ್.
ಶ್ರೀ. ಚಿರಂತನ್ ಜಿ.

ಸಹಾಯಕರು

ಶ್ರೀ. ಅಭಿನಂದನ್ ಟಿ.ಜಿ. (ಪ್ರದಸ)
ಶ್ರೀ. ಬಿ.ಸಿ. ಪ್ರಸಾದ್ (ಬೆ.ಗಾ.)
ಕು. ಲಾವಣ್ಯ ಆರ್. ಮತ್ತು ಶ್ರೀ. ಸಂದೀಪ ಆರ್. (ಸಹಾಯಕರು)
ಶ್ರೀ. ಎನ್.ಎಸ್. ಶ್ರೀಕಾಂತ್ (ವಾಹನ ಚಾಲಕರು)
ಶ್ರೀ. ಅರಬ್ ಜಾನ್ ಮತ್ತು ಶ್ರೀ. ಡಿ. ಜಿ. ಶಂಕರ್ ('ಡಿ' ಗ್ರೂಪ್ ನೌಕರರು)

Design by dataworx (www.dataworx.co.in)

ಕರ್ನಾಟಕ ಸರ್ಕಾರ

## ಕರ್ನಾಟಕ ಕೃಷಿ ಬೆಲೆ ಆಯೋಗ

(Karnataka Agriculture Price Commission)

(ಆದೇಶ ಸಂಖ್ಯೆ: ಕೃಇ61ಕೃಎಇ2013, ಬೆಂಗಳೂರು, ದಿ: 31/01/2014)

ಮತ್ತು

IIPM

## ಭಾರತೀಯ ತೋಟಗಾರಿಕೆ ವ್ಯವಸ್ಥಾಪಕ ಸಂಸ್ಥೆ

(Indian Institute of Plantation Management-IIPM)

# ಉತ್ಪಾದನಾ ವೆಚ್ಚ ಲೆಕ್ಕಾಚಾರ ಹಾಗೂ ಆಧುನಿಕ ಮಾರುಕಟ್ಟೆ ವಿಧಗಳು

**ರೈತ ಸಹಾಯ ಕೈಪಿಡಿ**

**ಆಗಸ್ಟ್** 2017

ಕೃಷಿ ಆಯುಕ್ತರ ಕಾರ್ಯಾಲಯ ಆವರಣ
ಶೇಷಾದ್ರಿ ರಸ್ತೆ, ಬೆಂಗಳೂರು – 560 001

# ಪರಿವಿಡಿ


| ವಿವರ | ಪುಟ ಸಂಖ್ಯೆ |
| --- | --- |
| ಮುನ್ನುಡಿ | i |
| 1. ಕೃಷಿ ಉತ್ಪಾದನಾ ವೆಚ್ಚ ಮತ್ತು ಆರ್ಥಿಕತೆ ಲೆಕ್ಕಾಚಾರ ವಿಧಾನ | 1 |
| I. ಚರ ವೆಚ್ಚ ಲೆಕ್ಕ ಹಾಕುವ ಪಟ್ಟಿ | 2 |
| II. ಸ್ಥಿರ ವೆಚ್ಚ ಲೆಕ್ಕ ಹಾಕುವ ಪಟ್ಟಿ | 4 |
| III. ಉತ್ಪಾದನಾ ವೆಚ್ಚ | 4 |
| IV. ಕಾರ್ಯಸಿದ್ಧಿ ಮಾರ್ಗಸೂಚಿ | 5 |
| V. ಮಾರುಕಟ್ಟೆ ಮಧ್ಯಪ್ರವೇಶ | 5 |
| VI. ಆದಾಯದ ಲೆಕ್ಕಾಚಾರ | 6 |
| 2. ಕೃಷಿ ಮಾರಾಟ ವ್ಯವಸ್ಥೆ | 8 |
| 3. ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿಯ ನಿಟ್ಟಿನಲ್ಲಿ ಕೃಷಿ ಬೆಲೆ ಆಯೋಗದ ಪ್ರಾಯೋಗಿಕ ಕಾರ್ಯಯೋಜನೆ | 17 |

# ಮುನ್ನುಡಿ

ರೈತರ ಉತ್ಪನ್ನಗಳಿಗೆ ಸ್ಥಿರ ಹಾಗೂ ಲಾಭದಾಯಕ ಬೆಲೆ ಸಿಗಲು ಸರ್ಕಾರದ ಮಧ್ಯಪ್ರವೇಶದ ಜೊತೆಗೆ ಅವರು ಮಾರುಕಟ್ಟೆಯೊಡನೆ ಸೂಕ್ತ ರೀತಿಯಲ್ಲಿ ವ್ಯವಹರಿಸುವುದೂ ಅತ್ಯಗತ್ಯ. ಕೃಷಿ ಮಾರುಕಟ್ಟೆಯನ್ನು ಸ್ಪರ್ಧಾತ್ಮಕಗೊಳಿಸಿ ಉತ್ಪನ್ನಗಳಿಗೆ ಉತ್ತಮ ಧಾರಣೆ ನೀಡುವ ನಿಟ್ಟಿನಲ್ಲಿ **ಆಧುನಿಕ ಮಾರುಕಟ್ಟೆ ಪ್ರಕಾರ**ಗಳಾದ ಇ–ಮಾರುಕಟ್ಟೆ, ಭವಿಷ್ಯದ ಮಾರುಕಟ್ಟೆ (Future Trading), ವಾಯಿದೆ ವ್ಯಾಪಾರ, ಬೆಲೆ ಏರಿಳಿತ ತಡೆಗಟ್ಟುವಿಕೆ (Hedging) ಇತ್ಯಾದಿಗಳ ಸಂಪೂರ್ಣ ಉಪಯೋಗ ರೈತರಿಗೆ ಸಿಗಬೇಕಾಗಿದೆ. ಜೊತೆಗೆ, ಮಾರುಕಟ್ಟೆ ವ್ಯವಹಾರದಲ್ಲಿ ರೈತರು ಏಕಾಂಗಿಯಾಗಿರುವುದರಿಂದ ದುರ್ಬಲರಾಗಿದ್ದು, ಅವರು **ಸಾಂಘಿಕವಾಗಿ ಒಗ್ಗೂಡಿ**, ಗುಂಪು ಮಾರಾಟದ ಮೂಲಕ ಚೌಕಾಸಿಶಕ್ತಿ ಹೆಚ್ಚಿಸಿಕೊಳ್ಳಬೇಕಾಗಿದೆ. ಒಟ್ಟಾರೆ **ನಿರೀಕ್ಷಿತ ಸ್ಥಿರವಾದ ಲಾಭದಾಯಕ ಬೆಲೆ** ರೈತಾಪಿ ವರ್ಗಕ್ಕೆ ಸಿಗಲು ಈ ಎಲ್ಲಾ ಆಧುನಿಕ ಮಾರಾಟ ಪದ್ಧತಿಗಳು ಸಹಾಯಕವಾಗಬೇಕಾಗಿದೆ. ಈ ಎಲ್ಲಾ ವಿಚಾರಗಳ ಮೇಲೆ ಬೆಳಕು ಚೆಲ್ಲಲು ಈ ಕೈಪಿಡಿ ಉಪಯೋಗವಾಗಲಿದೆ ಎಂದು ಹಾರೈಸುವೆನು.

ಹಾಗೆಯೇ, ಕೃಷಿಯನ್ನು ಒಂದು ಉದ್ದಿಮೆಯನ್ನಾಗಿ ಪರಿಗಣಿಸಿ ಅದರ ಲಾಭದಾಯಕತೆಯನ್ನಳೆಯಲು ಉತ್ಪಾದನಾ ವೆಚ್ಚವನ್ನು ವೈಜ್ಞಾನಿಕವಾಗಿ ಲೆಕ್ಕಾಚಾರ ಹಾಕುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಕೇಂದ್ರದ **'ಕೃಷಿ ವೆಚ್ಚ ಮತ್ತು ಬೆಲೆ ಆಯೋಗ'** (Commission for Agricultural Costs and Prices-CACP) ದ ಮಾರ್ಗಸೂಚಿಯ ಅನುಸಾರ ಉತ್ಪಾದನಾ ವೆಚ್ಚದ ಲೆಕ್ಕಾಚಾರದ ಸರಳ ಪಟ್ಟಿಯನ್ನು ಹಾಗೂ ಲಾಭದಾಯಕತೆ ಅಳೆಯುವ ಸೂತ್ರಗಳನ್ನು ನೀಡಲಾಗಿದೆ. ಇದರ ಉಪಯೋಗವನ್ನೂ ರೈತಾಪಿ ವರ್ಗ ಪಡೆಯಲಿ ಎಂದು ಹಾರೈಸಲಾಗಿದೆ.


ಈ ಕಿರುಹೊತ್ತಿಗೆ ತಯಾರಿಕೆಗೆ ಅಗತ್ಯ ಮಾಹಿತಿಗಳನ್ನು ನೀಡಿ ನೆರವಾಗಿರುವ **ಡಾ. ಎ. ಎನ್. ವಿಜಯ್‌ಕುಮಾರ್**, ಸಹ ಪ್ರಾಧ್ಯಾಪಕರು, ಭಾರತೀಯ ತೋಟಗಾರಿಕೆ ವ್ಯವಸ್ಥಾಪಕ ಸಂಸ್ಥೆ, ಬೆಂಗಳೂರು ಇವರಿಗೆ ಕೃತಜ್ಞತೆಗಳು.

**ಆಗಸ್ಟ್** 2017
ಬೆಂಗಳೂರು

**ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿ**
ಅಧ್ಯಕ್ಷರು, ಕರ್ನಾಟಕ ಕೃಷಿ ಬೆಲೆ ಆಯೋಗ

## 1. ಕೃಷಿ ಉತ್ಪಾದನಾ ವೆಚ್ಚ ಮತ್ತು ಆರ್ಥಿಕತೆ ಲೆಕ್ಕಾಚಾರ ವಿಧಾನ

**"ನಮ್ಮ ರೈತರಿಗೆ ಬರಿ ತಾಂತ್ರಿಕ ಮಾಹಿತಿಗಳನ್ನು ನೀಡಿದರೆ ಸಾಲದು. ಆರ್ಥಿಕ ವಿಚಾರ ಮತ್ತು ಲಾಭದಾಯಕತೆಗಳ ಬಗ್ಗೆ ಅಂಕಿ–ಅಂಶಗಳನ್ನೂ ಒದಗಿಸಬೇಕು"**. – ಇದು ಭಾರತದಲ್ಲಿ ಹಸಿರು ಕ್ರಾಂತಿಯ ಹರಿಕಾರ ಡಾ. ಎಂ.ಎಸ್. ಸ್ವಾಮಿನಾಥನ್‌ರವರ ಸ್ಪಷ್ಟೋಕ್ತಿ. ಕೃಷಿಯನ್ನು ಒಂದು ಸುಸ್ಥಿರ ಉದ್ದಿಮೆಯಾಗಿ ಪರಿವರ್ತಿಸಬೇಕಾದಲ್ಲಿ ಬೆಳೆ **ಉತ್ಪಾದನೆಯ ವೆಚ್ಚ ಮತ್ತು ಆರ್ಥಿಕತೆಯನ್ನು** ವೈಜ್ಞಾನಿಕವಾಗಿ ಲೆಕ್ಕ ಹಾಕುವುದು ಅತ್ಯಗತ್ಯ. ಒಂದು ಬೆಳೆ ಬೆಳೆಯಲು ರೈತರು ಮಾಡುವ **ನೇರ ವೆಚ್ಚ**, ನಗದು ರೂಪದ ಖರ್ಚು ಮಾತ್ರವಲ್ಲದೆ ಅವರು ಸ್ವತಃ ಬಳಸುವ ಶ್ರಮ ಮತ್ತು **ಯಂತ್ರೋಪಕರಣಗಳ ಸವಕಳಿ** (Depreciation), ಹೂಡಿರುವ ಬಂಡವಾಳದ ಮೇಲಿನ ಬಡ್ಡಿ ಇತ್ಯಾದಿಗಳನ್ನು ಪರಿಗಣಿಸಬೇಕಾಗುತ್ತದೆ. ಜೊತೆಗೆ, ಸಾಮಾನ್ಯ ಲೆಕ್ಕಾಚಾರಕ್ಕೆ ಒಳಪಡದ **ಸ್ವಂತ ಭೂಮಿಯ ಗೇಣಿ,** ಕೃಷಿ ಕಾರ್ಯದ ಮೇಲ್ವಿಚಾರಣೆ, ಉಸ್ತುವಾರಿಯಲ್ಲಿ ತೊಡಗಿಸಿದ ಸಮಯ ಇತ್ಯಾದಿಗಳ **ಅವಕಾಶ ವೆಚ್ಚ** (Opportunity Cost) ವನ್ನೂ ಪರಿಗಣಿಸಬೇಕಾಗುತ್ತದೆ. ಹೀಗೆ ಒಟ್ಟು ಉತ್ಪಾದನಾ ವೆಚ್ಚವನ್ನು **ಚರ ವೆಚ್ಚ** (Variable Cost) ಮತ್ತು **ಸ್ಥಿರ ವೆಚ್ಚ** (Fixed Cost) ಗಳ ಜೊತೆಗೆ ಅವಕಾಶ ವೆಚ್ಚಗಳನ್ನು ಸೇರಿಸಿ ಲೆಕ್ಕಾಚಾರ ಹಾಕುವುದು **ಫಾರಂ ನಿರ್ವಹಣಾ ಅರ್ಥಶಾಸ್ತ್ರ** (Farm Management Economics) ದ ಮೂಲ ತತ್ವವಾಗಿರುತ್ತದೆ.




ಅ) **ಚರ ವೆಚ್ಚ** (Variable Cost): ಈ ವೆಚ್ಚವು ಬೆಳೆ ಉತ್ಪಾದನೆಯ ಮಟ್ಟವನ್ನು ಅವಲಂಬಿಸಿ ವ್ಯತ್ಯಾಸವಾಗುತ್ತದೆ. ಉತ್ಪಾದನೆಯನ್ನು ಕೈಗೊಳ್ಳದಿದ್ದರೆ ಈ ವೆಚ್ಚವು ಇರುವುದಿಲ್ಲ. ಉದಾಹರಣೆಗೆ: ದಿನಗೂಲಿ, ಬೀಜ, ಗೊಬ್ಬರ, ಕೀಟನಾಶಕ, ಇತ್ಯಾದಿಗಳ ಮೇಲಿನ ಖರ್ಚು.

ಆ) **ಸ್ಥಿರ ವೆಚ್ಚ** (Fixed Cost): ಈ ವೆಚ್ಚವು ಬೆಳೆ ಉತ್ಪಾದನೆಯ ಮಟ್ಟವನ್ನು ಅವಲಂಬಿಸಿ ವ್ಯತ್ಯಾಸ ಹೊಂದದೆ ಸ್ಥಿರವಾಗಿರುತ್ತದೆ. ಉತ್ಪಾದನೆಯನ್ನು ಕೈಗೊಳ್ಳದಿದ್ದರೂ ಈ ಖರ್ಚನ್ನು ಭರಿಸಬೇಕಾಗುತ್ತದೆ. ಉದಾಹರಣೆಗೆ: ಗೇಣಿ, ಭೂ ಕಂದಾಯ, ಸ್ಥಿರ ಬಂಡವಾಳದ ಮೇಲಿನ ಬಡ್ಡಿ ಇತ್ಯಾದಿ.

ಇ) **ಅವಕಾಶ ವೆಚ್ಚ** (Opportunity Cost): ರೈತರ ಶ್ರಮ, ಸ್ವಯಂ ಬಳಸುವ ಭೂಮಿಯ ಗೇಣಿ ಮತ್ತು ಸ್ವಂತ ಬಂಡವಾಳದ ಮೇಲಿನ ಬಡ್ಡಿ ಇವುಗಳ ಮೌಲ್ಯವನ್ನೂ ಕೃಷಿ ಉತ್ಪಾದನೆಗೆ ತಗಲುವ ವೆಚ್ಚವೆಂದು ಪರಿಗಣಿಸಬೇಕಾಗುತ್ತದೆ.

ಉದಾಹರಣೆಗೆ ಮನೆಯ ಸದಸ್ಯರು ತಮ್ಮದೇ ಹೊಲದಲ್ಲಿ ಕೆಲಸ ಮಾಡುತ್ತಿದ್ದರೆ ಅವರು ಹೊರಗೆಲ್ಲಾದರೂ ದುಡಿದು ಆದಾಯ ಗಳಸುವ ಅವಕಾಶವನ್ನು ಕಳೆದುಕೊಳ್ಳುತ್ತಾರೆ. ಇದನ್ನು **'ಅವಕಾಶ ವೆಚ್ಚ'** ವೆಂದು ಅರ್ಥಶಾಸ್ತ್ರದಲ್ಲಿ ಪರಿಗಣಿಸಲಾಗುವುದು. ಹಾಗೇ ಸ್ವಂತ ಭೂಮಿಗೆ ಗೇಣಿ ಮತ್ತು ಸ್ವಂತ ಬಂಡವಾಳದ ಬಡ್ಡಿಯನ್ನು ಅಂದಾಜು ಮಾಡಿ ಪರಿಗಣಿಸಬೇಕಾಗುತ್ತದೆ.

**ಈ) ಸವಕಳ ವೆಚ್ಚ**: ಬೀಜ, ಗೊಬ್ಬರ ಇತ್ಯಾದಿ ಬೇಸಾಯ ಸಾಮಗ್ರಿಗಳನ್ನು ಒಮ್ಮೆ ಬಳಸಿದಾಗ ಅವು ಸಂಪೂರ್ಣ ಖಾಲಿಯಾಗುತ್ತವೆ. ಆದ್ದರಿಂದ ಅವುಗಳ ಮಾರುಕಟ್ಟೆ ಮೌಲ್ಯವನ್ನು ವೆಚ್ಚವೆಂದು ತೆಗೆದುಕೊಳ್ಳಲಾಗುವುದು. ಆದರೆ ಟ್ರಾಕ್ಟರ್, ಪಂಪ್ ಸೆಟ್ ಮುಂತಾದ ಯಂತ್ರಗಳು, ಸಂಗ್ರಹಣಾ ಕಟ್ಟಡಗಳು ಬಹುಕಾಲ ಬಾಳುತ್ತವೆ. ಅಂತಹ ಬಹುಕಾಲ ಉಪಯೋಗಿ ಯಂತ್ರ, ಸಲಕರಣೆ, ಕಟ್ಟಡ ಇತ್ಯಾದಿಗಳ ಮೌಲ್ಯ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಾ ಹೋಗುತ್ತದೆ. ಈ ರೀತಿಯ ವಾರ್ಷಿಕ ಮೌಲ್ಯ ಕುಸಿತವನ್ನು **ಸವಕಳ** (Depreciation) ಎನ್ನುತ್ತಾರೆ. ಈ ಸವಕಳ ಮೌಲ್ಯವನ್ನು ಒಂದು ಉತ್ಪಾದನಾ ವೆಚ್ಚವೆಂದು ಪ್ರತಿ ವರ್ಷ ಪರಿಗಣಿಸಲಾಗುವುದು. ಇದನ್ನು ಕಂಡು ಹಿಡಿಯುವ ವಿಧಾನ:

**ಖರೀದಿಸಿದ ಮೌಲ್ಯ (ರೂ.) – ಗುಜರಿ ಮೌಲ್ಯ (ರೂ.)**

**ಪ್ರತಿ ವರ್ಷದ ಸವಕಳ ವೆಚ್ಚ = ------------------------------------**

**ಬಾಳಕೆಯ ಅವಧಿ (ವರ್ಷಗಳಲ್ಲಿ)**

ಈ ಎಲ್ಲಾ ವೆಚ್ಚಗಳನ್ನು ಲೆಕ್ಕ ಮಾಡುವ ಪಟ್ಟಿಯನ್ನು ಮುಂದೆ ಕೊಡಲಾಗಿದೆ:

## ಕೃಷಿ ಉತ್ಪಾದನಾ ವೆಚ್ಚ ಲೆಕ್ಕಾಚಾರ ಪಟ್ಟಿ

### I. ಚರ ವೆಚ್ಚ ಲೆಕ್ಕ ಹಾಕುವ ಪಟ್ಟಿ

**ಬೆಳೆ:**_________________; **ತಳ:**_________________; **ವಿಸ್ತೀರ್ಣ**___________ (ಎಕರೆಗಳಲ್ಲಿ);

**ಕಾಲ**: ಹಿಂಗಾರು / ಮುಂಗಾರು / ಬೇಸಿಗೆ;

**ಕೂಲಿ ದರ**: ಗಂಡಾಳು__________ ರೂ.; ಹೆಣ್ಣಾಳು _________ ರೂ.; ಎತ್ತುಗಳು __________ ರೂ.;

**ಯಂತ್ರಗಳ ಬಾಡಿಗೆ**: ಟ್ರಾಕ್ಟರ್ _________ ರೂ./ಗಂಟೆ; ಟಿಲ್ಲರ್ __________ ರೂ.;

ಸ್ಪ್ರೇಯರ್ __________ ರೂ.; ಕಟಾವು/ಒಕ್ಕಣೆ ಯಂತ್ರ ____________ ರೂ.

| ಕ್ರ. ಸಂ. | ವಿವರ | ಸಾಮಾಗ್ರಿಗಳು | | | ಮಾನವ/ಪಶು ಶ್ರಮ (ದಿನಗಳಲ್ಲಿ) | | | | | | ಯಾಂತ್ರಿಕ ಶ್ರಮ (ಗಂಟೆಗಳಲ್ಲಿ) | | |
|---|---|---|---|---|---|---|---|---|---|---|---|---|---|
| | | ಹೆಸರು | ಪ್ರಮಾಣ (ಕೆ.ಜಿ/ಕ್ವಿಂ) | ಮೌಲ್ಯ (ರೂ.) | ಮನೆಯವರು | | ಕೂಲಿಯವರು | | ಎತ್ತು | ವೆಚ್ಚ (ರೂ.) | ಯಂತ್ರದ ಪ್ರಕಾರ | ಸಮಯ | ವೆಚ್ಚ (ರೂ.) |
| | | | | | ಗಂಡು | ಹೆಣ್ಣು | ಗಂಡು | ಹೆಣ್ಣು | | | | | |
| **ಅ** | **ಸಸಿಮಡಿಗೆ** | | | | | | | | | | | | |
| 1 | ಉಳುಮೆ | | | | | | | | | | | | |
| 2 | ಕೊ. ಗೊಬ್ಬರ | | | | | | | | | | | | |
| 3 | ಸಸಿಮಡಿ | | | | | | | | | | | | |
| 4 | ಬೀಜೋಪಚಾರ | | | | | | | | | | | | |
| 5 | ಬಿತ್ತನೆ | | | | | | | | | | | | |
| 6 | ರಾ. ಗೊಬ್ಬರ | | | | | | | | | | | | |
| 7 | ಕೀಟನಾಶಕ | | | | | | | | | | | | |
| 8 | ಸಿಂಪರಣೆ | | | | | | | | | | | | |
| 9 | ನೀರಾವರಿ | | | | | | | | | | | | |
| 10 | ಇತರೆ (ಹೆಸರಿಸಿ) | | | | | | | | | | | | |
| **ಬ** | **ಗದ್ದೆ/ಹೊಲಕ್ಕೆ** | | | | | | | | | | | | |
| 1 | ಉಳುಮೆ | | | | | | | | | | | | |
| 2 | ಕೊ.ಗೊಬ್ಬರ | | | | | | | | | | | | |
| 3 | ನಾಟಿ/ಬಿತ್ತನೆ | | | | | | | | | | | | |
| 4 | ರಾ. ಗೊಬ್ಬರ | | | | | | | | | | | | |
| 5 | ಕಳೆ ಕೀಳುವಿಕೆ | | | | | | | | | | | | |
| 6 | ಅಂ. ಬೇಸಾಯ | | | | | | | | | | | | |
| 7 | ಕೀಟನಾಶಕ | | | | | | | | | | | | |
| 8 | ನೀರಾವರಿ | | | | | | | | | | | | |
| 9 | ಕಾವಲು | | | | | | | | | | | | |
| **ಕ** | **ಕೊಯಿಲು ಮತ್ತು ನಂತರ** | | | | | | | | | | | | |
| 1 | ಕಾಯಿಲು | | | | | | | | | | | | |
| 2 | ಸಾಗಣೆ | | | | | | | | | | | | |
| 3 | ಒಕ್ಕಣೆ | | | | | | | | | | | | |
| 4 | ಹುಲ್ಲು ರಾಶಿ | | | | | | | | | | | | |
| 5 | ಗ್ರೇಡಿಂಗ್ | | | | | | | | | | | | |
| 6 | ಮಾರಾಟ | | | | | | | | | | | | |
| 7 | ಇತರೆ (ಹೆಸರಿಸಿ) | | | | | | | | | | | | |
| | **ಒಟ್ಟು** | | | **ಅ** | | | | | | **ಆ** | | | **ಇ** |

ಚರ ವೆಚ್ಚದ ಮೇಲಿನ ಬಡ್ಡಿ (ಶೇ_____) (ಈ) = _________ ರೂ.ಗಳಲ್ಲಿ

**ಒಟ್ಟು ಚರ ವೆಚ್ಚ (ಕ):** ಅ + ಆ + ಇ + ಈ = __________ರೂ.ಗಳಲ್ಲಿ

## II. ಸ್ಥಿರ ವೆಚ್ಚ ಲೆಕ್ಕ ಹಾಕುವ ಪಟ್ಟಿ

| ಕ್ರ. ಸಂ. | ವಿವರ | ಮೊತ್ತ (ರೂ.) |
|---|---|---|
| 1 | ಭೂ ಕಂದಾಯ | |
| 2 | ಸವಕಳಿ ವೆಚ್ಚ (ಯಂತ್ರಗಳು, ಉಪಕರಣಗಳು, ಕಟ್ಟಡಗಳು) | |
| 3 | ಸ್ಥಿರ ಬಂಡವಾಳದ ಮೇಲಿನ ಬಡ್ಡಿ (ಶೇ.__________) | |
| 4 | ಭೂಮಿಯ ಗೇಣಿ | |
| 5 | ವಿಮಾ ಕಂತು | |
| 6 | ಇತರೆ (ಹೆಸರಿಸಿ) | |

## III. ಒಟ್ಟು ಉತ್ಪಾದನಾ ವೆಚ್ಚ (ಮ) = ಒಟ್ಟು ಚರ ವೆಚ್ಚ (ಕ) + ಒಟ್ಟು ಸ್ಥಿರ ವೆಚ್ಚ (ಖ)

ಒಟ್ಟು ವೆಚ್ಚದ ಮೇಲೆ ಶೇ. 10 ರಷ್ಟನ್ನು ರೈತರು **'ಉಸ್ತುವಾರಿ ಮತ್ತು ನಿರ್ವಹಣೆಗೆ ಭರಿಸುವ ವೆಚ್ಚ'** (Managerial Cost) ಎಂದು ಪರಿಗಣಿಸಲಾಗುತ್ತದೆ. ಈ ಎಲ್ಲಾ ವೆಚ್ಚಗಳನ್ನು ವೆಚ್ಚ ಅ (Cost A), ವೆಚ್ಚ ಬ (Cost B) ಮತ್ತು ವೆಚ್ಚ ಕ (Cost C) ಗಳೆಂದು ಪುನರ್ ವಿಂಗಡಿಸಲಾಗುತ್ತದೆ. ಅವುಗಳ ವಿವರ ಈ ಕೆಳಕಂಡಂತಿದೆ.

**ವೆಚ್ಚ ಅ**$_1$ = ಶ್ರಮ (ಮಾನವ, ಎತ್ತಿನ ಮತ್ತು ಯಾಂತ್ರಿಕ), ಬೀಜ, ಕೊಟ್ಟಿಗೆ ಗೊಬ್ಬರ, ರಾಸಾಯನಿಕ ಗೊಬ್ಬರಗಳು, ಕೀಟನಾಶಕಗಳು, ನೀರಾವರಿ ವೆಚ್ಚ, ಸವಕಳಿ ವೆಚ್ಚ, ಭೂಕಂದಾಯ ಮತ್ತು ತೆರಿಗೆ, ಚರ ವೆಚ್ಚದ ಮೇಲಿನ ಬಡ್ಡಿ, ವಿಮಾ ಮೊತ್ತ ಮತ್ತು ಪ್ರತ್ಯೇಕವಾಗಿ ರೈತ ಮಾಡಿರುವ ಇತರೆ ವೆಚ್ಚಗಳು.

**ವೆಚ್ಚ ಅ**$_2$ = ವೆಚ್ಚ ಅ$_1$ + ಹೊರಗಿನಿಂದ ಪಡೆದ ಭೂಮಿಯ ಗೇಣಿ
**ವೆಚ್ಚ ಬ**$_1$ = ವೆಚ್ಚ ಅ$_1$ + ಭೂಮಿ ಹೊರತಾಗಿ ಇತರೆ ಸ್ವಂತ ಆಸ್ತಿಯ ಮೇಲಿನ ಬಡ್ಡಿ
**ವೆಚ್ಚ ಬ**$_2$ = ವೆಚ್ಚ ಬ$_1$ + ಹೊರಗಿನ ಭೂಮಿಯ ಗೇಣಿ + ಸ್ವಂತ ಭೂಮಿಯ ಗೇಣಿ
**ವೆಚ್ಚ ಕ**$_1$ = ವೆಚ್ಚ ಬ$_1$ + ಕುಟುಂಬದ ಮಾನವ ಶ್ರಮ
**ವೆಚ್ಚ ಕ**$_2$ = ವೆಚ್ಚ ಬ$_2$ + ಕುಟುಂಬದ ಮಾನವ ಶ್ರಮ
**ವೆಚ್ಚ ಕ**$_3$ = ವೆಚ್ಚ ಕ$_2$ + ನಿರ್ವಹಣಾ ವೆಚ್ಚ (ವೆಚ್ಚ ಕ$_2$ ವಿನ ಶೇ. 10ರ ಭಾಗ)

ಈ ಎಲ್ಲಾ ವೆಚ್ಚದ ಬಾಬ್ತುಗಳನ್ನು ಲೆಕ್ಕ ಹಾಕುವ ಮೂಲ ಉದ್ದೇಶ ರೈತ ಕೃಷಿಯಲ್ಲಿ ಹಾಕಿದ ಶ್ರಮ, ತೊಡಗಿಸಿದ ಬಂಡವಾಳಕ್ಕೆ ಸಿಗುವ ಪ್ರತಿಫಲ ಅಥವಾ ನಿವ್ವಳ ಆದಾಯವನ್ನು ಕರಾರುವಕ್ಕಾಗಿ ನಿರ್ಧರಿಸುವುದಾಗಿದೆ. ಕೇಂದ್ರ ಸರ್ಕಾರದ ಕೃಷಿ ಮಂತ್ರಾಲಯದ ಅಧೀನದ **ಆರ್ಥಿಕ ಮತ್ತು ಸಂಖ್ಯಾ ನಿರ್ದೇಶನಾಲಯ** (Directorate of Economics and Statistics) ವಿವಿಧ ರಾಜ್ಯಗಳಿಂದ ಈ ರೀತಿ ವ್ಯವಸ್ಥಿತವಾಗಿ 25 ಪ್ರಮುಖ ಬೆಳೆಗಳ ಉತ್ಪಾದನಾ ವೆಚ್ಚವನ್ನು ಪ್ರತಿ ವರ್ಷ ಲೆಕ್ಕಾಚಾರ ಹಾಕಿ ಸಿದ್ದಪಡಿಸುತ್ತಿರುತ್ತದೆ. ಈ ಆಧಾರದ ಮೇಲೆ ಈ ಬೆಳೆಗಳಿಗೆ **ಕನಿಷ್ಠ ಬೆಂಬಲ ಬೆಲೆಯನ್ನು** (Minimum Support Price) ಕೊಡಲಾಗುತ್ತದೆ. ಜೊತೆಗೆ ಕೆಲ ರಾಜ್ಯಗಳ ಕೃಷಿ ಇಲಾಖೆಗಳೂ ಕೂಡ ತಮ್ಮ ಪ್ರಮುಖ ಬೆಳೆಗಳ ಬೆಲೆ ಕುಸಿತವಾದಾಗ **ಮಾರುಕಟ್ಟೆ ಮಧ್ಯಪ್ರವೇಶ ಯೋಜನೆ** (Market Intervention Scheme) ಗಾಗಿ ಈ ವೆಚ್ಚದ ವಿವರಗಳನ್ನು ಬಳಸಲಾಗುತ್ತದೆ.


## IV. ಕಾರ್ಯಸಿದ್ಧಿ ಮಾರ್ಗಸೂಚಿ

ಕೇಂದ್ರ ಸರ್ಕಾರ ಪ್ರತಿವರ್ಷ ಎರಡು ಬೆಳೆ ಋತುಮಾನಗಳಲ್ಲಿ ಮುಂಚಿತವಾಗಿ 25 ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (MSP) ಘೋಷಿಸುತ್ತದೆ. ಈ ಬೆಳೆಗಳೆಂದರೆ ಭತ್ತ, ಗೋದಿ, ಜೋಳ, ಸಜ್ಜೆ, ಮೆಕ್ಕೆ ಜೋಳ, ರಾಗಿ, ಬಾರ್ಲಿ (ಏಕದಳ ದಾನ್ಯಗಳು), ತೊಗರಿ, ಹೆಸರು, ಉದ್ದು, ಕಡಲೆ, ಮಸೂರ್ (ದ್ವಿದಳ ಧಾನ್ಯಗಳು), ಶೇಂಗಾ, ಸೂರ್ಯಕಾಂತಿ, ಸೋಯ ಅವರೆ, ಎಳ್ಳು, ಹುಚ್ಚೆಳ್ಳು, ಸಾಸಿವೆ, ಕುಸುಬೆ (ಎಣ್ಣೆ ಕಾಳುಗಳು), ಹತ್ತಿ. ಸೆಣಬು ಮತ್ತು ಕೊಬ್ಬರಿ (ವಾಣಿಜ್ಯ ಬೆಳೆಗಳು). ಇದರ ಯಶಸ್ವಿ ಅನುಷ್ಠಾನಕ್ಕಾಗಿ, ವಿಸ್ತೃತ '**ಬೆಂಬಲ ಬೆಲೆ ಯೋಜನೆಯ ಕಾರ್ಯಸಿದ್ಧಿ ಮಾರ್ಗಸೂಚಿ**' (Price Support Scheme Operational Guidelines) ಒಂದನ್ನು ರೂಪಿಸಿರುತ್ತದೆ.

**ಈ ಮಾರ್ಗಸೂಚಿಯನ್ವಯ ಕನಿಷ್ಠ ಬೆಂಬಲ ಬೆಲೆ ಘೋಷಣೆ ಮಾಡಿರುವ ಬೆಳೆಗಳನ್ನು ರಾಜ್ಯ ಸರ್ಕಾರ ಆ ಸಾಲಿನ ಒಟ್ಟು ಉತ್ಪಾದನೆಯಲ್ಲಿ ಶೇ 25 ಪ್ರಮಾಣದವರೆಗೆ ಖರೀದಿಸಬಹುದಾಗಿದ್ದು ಇದಕ್ಕೆ ಕೇಂದ್ರದಿಂದ ಸಂಪೂರ್ಣ ಸಹಾಯ ಸಿಗಬಹುದಾಗಿರುತ್ತದೆ.**

## V. ಮಾರುಕಟ್ಟೆ ಮಧ್ಯಪ್ರವೇಶ

ಕೇಂದ್ರ ಸರ್ಕಾರ ಬಿತ್ತನೆಗೆ ಮುಂಚಿತವಾಗಿ "**ಕನಿಷ್ಠ ಬೆಂಬಲ ಬೆಲೆ**" ಯನ್ನು ಘೋಷಿಸಿ, ಸುಗ್ಗಿಯ ನಂತರ ಧಾರಣೆ ಕುಸಿತ ತಡೆಯಲು ವಿವಿಧ ಮಂಡಳಿ, ನಿಗಮಗಳ ಮೂಲಕ ಗೋದಿ, ಭತ್ತ, ಹತ್ತಿ ಮತ್ತು ಎಣ್ಣೆ ಕಾಳುಗಳನ್ನು ಖರೀದಿಸುತ್ತದೆ. ಕಬ್ಬನ್ನು ಕಾರ್ಖಾನೆಗಳು ಖರೀದಿಸುವ ವ್ಯವಸ್ಥೆ ಇರುತ್ತದೆ. ಜೊತೆಗೆ ಮುಸುಕಿನ ಜೋಳ, ತೊಗರಿ, ಕೊಬ್ಬರಿಯಂತಹ ಉತ್ಪನ್ನಗಳನ್ನು "**ಮಾರುಕಟ್ಟೆ ಮಧ್ಯಪ್ರವೇಶ**" ದ ಮೂಲಕ ಖರೀದಿಸಲು ಆಯಾ ರಾಜ್ಯಗಳಿಗೆ ಅನುವು ಮಾಡಿಕೊಡಲಾಗಿರುತ್ತದೆ.



ಬೆಲೆ ಕುಸಿದಾಗ ಮೇಲೆ ತಿಳಿಸಿದಂತೆ ಅಲ್ಪ ಪ್ರಮಾಣದ ಖರೀದಿ ಮಾಡಿ ಮಾರುಕಟ್ಟೆ ಚೇತರಿಸುವಂತೆ ಮಾಡುವುದೇ ಕನಿಷ್ಠ ಬೆಂಬಲ ಬೆಲೆ ಮತ್ತು ಆ ಮೂಲಕ ಮಾರುಕಟ್ಟೆ ಮಧ್ಯ ಪ್ರವೇಶಗಳ ಉದ್ದೇಶವಾಗಿರುತ್ತದೆ. ರೈತ ಉತ್ಪಾದಿಸಿದ ಬಹು ಪ್ರಮಾಣದ ಉತ್ಪನ್ನಕ್ಕೆ ನಂತರ ಮುಕ್ತ ಮಾರುಕಟ್ಟೆಯಲ್ಲಿ ಅಧಿಕ ಲಾಭದಾಯಕ ಬೆಲೆ ಸಿಗುವಂತೆ ಮಾಡುವುದೇ **ಕೃಷಿ ಬೆಲೆ ನೀತಿಯ** ಪರಮ ಧ್ಯೇಯವಾಗಿರುತ್ತದೆ.

## VI. ಆದಾಯದ ಲೆಕ್ಕಾಚಾರ

ರೈತರು ಅಂತಿಮವಾಗಿ ಪಡೆಯುವ ಪ್ರತಿಫಲ ಅಥವಾ ನಿವ್ವಳ ಆದಾಯವನ್ನು ಎರಡು ರೀತಿಯಲ್ಲಿ ಲೆಕ್ಕಾಚಾರ ಹಾಕಿ ವಿಶ್ಲೇಷಿಸಬಹುದು.

ಅ. **ಅಲ್ಪ ಅವಧಿಯಲ್ಲಿ** ರೈತ ಕೃಷಿಯಲ್ಲಿ ನೇರವಾಗಿ ಭರಿಸಿರುವ ಚರ ವೆಚ್ಚವಾದರೂ ಪಡೆದ ಉತ್ಪನ್ನದ ಮೌಲ್ಯದಿಂದ ವಾಪಸ್ಸಾಗಿ ಮಿಗಿತ (ಲಾಭಾಂಶ) ಸಿಗಬೇಕು. ಇದನ್ನು ನಿವ್ವಳ ಆದಾಯದ ಮೊದಲನೆ ವಿಧವೆನ್ನಬಹುದು.

ಆ. ಇನ್ನು **ಧೀರ್ಘಾವಧಿಯಲ್ಲಿ** ಭರಿಸಿದ ಚರ ಮತ್ತು ಸ್ಥಿರ ವೆಚ್ಚಗಳೂ ಹಿಂತಿರುಗಿ, ರೈತನಿಗೆ ಒಟ್ಟು ವೆಚ್ಚದ ಮೇಲೆ ಮಿಗಿತ (ಲಾಭಾಂಶ) ಸಿಗುವಂತಾಗಬೇಕು. ಇದು ನಿವ್ವಳ ಆದಾಯದ ಎರಡನೇ ವಿಧ.

ಮುಖ್ಯ ಉತ್ಪನ್ನ ಮತ್ತು ತೃಣ ಉತ್ಪನ್ನಗಳ ಮೌಲ್ಯ ಲೆಕ್ಕ ಹಾಕುವ ವಿಧಾನ:

ಅ. ಧಾನ್ಯ/ಮುಖ್ಯ ಉತ್ಪನ್ನದ ಮೌಲ್ಯ=ಪ್ರಮಾಣ (ಕ್ವಿಂ)____ಥ ಬೆಲೆ ರೂ./ಕ್ವಿ _____= ____(ಗ)
ಆ. ಹುಲ್ಲು/ತೃಣ ಉತ್ಪನ್ನದ ಮೌಲ್ಯ=ಪ್ರಮಾಣ (ಕ್ವಿಂ)_____ಥ ಬೆಲೆ ರೂ./ಕ್ವಿಂ ____= ____(ಫ)

**ಕೃಷಿ ಆದಾಯವನ್ನು ಈ ಕೆಳಗಿನಂತೆ ಲೆಕ್ಕಾಚಾರ ಹಾಕಬಹುದು:**

1. ಒಟ್ಟು ಆದಾಯ (ರೂ.) = ಗ + ಫ ________ ರೂ. / ಎಕರೆ(ಡ)

2. ಲಾಭ/ನಷ್ಟ (ರೂ) = ಒಟ್ಟು ಆದಾಯ (ಡ) – ನೇರ ಭರಿಸಿದ ವೆಚ್ಚ (ಅ2)/ಒಟ್ಟು ವೆಚ್ಚ ($ಕ_3$) = _____ ರೂ./ಎಕರೆ

3. ಪ್ರತಿ ರೂಪಾಯಿ ಹೂಡಿಕೆಗೆ ದೊರೆತ ಆದಾಯ (B:C Ratio) = ಒಟ್ಟು ಆದಾಯ (ಡ) / ಒಟ್ಟು ವೆಚ್ಚ ($ಅ_2$ / $ಕ_3$)

ಅಂತಿಮವಾಗಿ ಈ ಎಲ್ಲಾ ವೆಚ್ಚ, ಅಂಕಿ–ಅಂಶ, ಲೆಕ್ಕಾಚಾರಗಳು ಕೃಷಿ ಒಂದು ಲಾಭದಾಯಕ ಉದ್ದಿಮೆ ಹೌದೆ ಅಥವಾ ಅಲ್ಲವೆ ಎಂಬುದನ್ನು ನಿರ್ಧರಿಸಲು ಸಹಾಯವಾಗುತ್ತದೆ. ರೈತರ ಆದಾಯವನ್ನು ಗರಿಷ್ಠಗೊಳಿಸಲು ಲಾಭದಾಯಕ ಬೆಲೆ ಮಾತ್ರವಲ್ಲ **ಉತ್ಪಾದನಾ ವೆಚ್ಚ ಕಡಿಮೆ ಮಾಡುವುದು** (Cost Minimization) **ಉತ್ಪಾದಕತೆ ಅಧಿಕಗೊಳಿಸುವ** (Yield Optimization) ವಿಚಾರಗಳತ್ತ ಗಮನ ಹರಿಸುವುದು ಮುಖ್ಯವಾಗಿರುತ್ತದೆ. ಆ ಮೂಲಕ ರೈತ ಸಮುದಾಯ ಸಂಪೂರ್ಣವಾಗಿ ಕೃಷಿಯಲ್ಲಿ ತೊಡಗುವಂತೆ ಮಾಡಲು ಹಾಗೇ ಕೃಷಿಯ ಒಟ್ಟಾರೆ ಅಭಿವೃದ್ಧಿಯಾಗಿ ದೇಶ ಪ್ರಗತಿಯತ್ತ ಸಾಗಲು ಅಗತ್ಯ ನೀತಿ, ನಿಯಮ, ಕಾರ್ಯಯೋಜನೆಗಳನ್ನು ರೂಪಿಸಲು ಸರ್ಕಾರಕ್ಕೆ ನೆರವಾಗಲಿವೆ.

## ಕರ್ನಾಟಕದ ಪ್ರಮುಖ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಎಕರೆವಾರು ಆರ್ಥಿಕದಾಯಕತೆ: 2015-16

| ಗುಂಪು | ಕ್ರ. ಸಂ. | ಬೆಳೆಗಳು | ಕನಿಷ್ಠ ಬೆಂಬಲ/ ಖರೀದಿ ಬೆಲೆ (ರೂ./ ಕ್ವಿಂಟಾಲ್) 2016-17 | ಭರಿಸಿದ ವೆಚ್ಚ+ ಕುಟುಂಬದ ಶ್ರಮ (ರೂ./ ಎಕರೆ) | ಇಳುವರಿ (ಕ್ವಿಂಟಾಲ್/ ಎಕರೆ) | ಬೆಲೆ (ರೂ./ ಕ್ವಿಂಟಾಲ್) | ಒಟ್ಟು ಆದಾಯ (ರೂ./ ಎಕರೆ) | ನಿವ್ವಳ ಆದಾಯ/ನಷ್ಟ (ರೂ./ಎಕರೆ) | |
|---|---|---|---|---|---|---|---|---|---|
| | | | | | | | | ಭರಿಸಿದ ವೆಚ್ಚ ಮತ್ತು ಕುಟುಂಬದ ಶ್ರಮದ ಮೇಲೆ | ಕನಿಷ್ಠ ಬೆಂಬಲ ಬೆಲೆ ಮೇಲೆ (ಶೇ) |
| ಏಕದಳ ಧಾನ್ಯಗಳು | 1 (a) | ಭತ್ತ (ನೀ) | 1470 | 32168 | 26.18 | 1674 | 46058 | 13890 | 28 |
| | 1 (b) | ಭತ್ತ (ಮಳೆ) | 1470 | 26808 | 16.18 | 1185 | 25591 | -1216 | 17 |
| | 2 | ರಾಗಿ | 1725 | 21917 | 7.77 | 1789 | 17186 | -4731 | -28 |
| | 3 (a) | ಜೋಳ (ಹೈ) | 1625 | 13841 | 8.00 | 1649 | 14083 | 242 | 0 |
| | 3 (b) | ಜೋಳ (ಬಿಳಿ) | 1650 | 17191 | 6.10 | 2433 | 19831 | 2640 | -18 |
| | 4 | ಮುಸುಕಿನ ಜೋಳ | 1365 | 20893 | 23.10 | 1281 | 29590 | 8697 | 51 |
| | 5 | ಸಜ್ಜೆ | 1330 | 16559 | 5.52 | 1299 | 8481 | -8078 | -52 |
| ದ್ವಿದಳ ಧಾನ್ಯಗಳು | 6 | ಕಡಲೆ | 4000 | 19877 | 4.37 | 4862 | 21251 | 1375 | -12 |
| | 7 | ತೊಗರಿ | 5050 | 21687 | 6.20 | 8273 | 51263 | 29575 | 44 |
| | 8 | ಉದ್ದು | 5000 | 16404 | 2.07 | 7014 | 14496 | -1908 | -37 |
| | 9 | ಹೆಸರು | 5225 | 16393 | 3.66 | 5552 | 20338 | 3945 | 17 |
| ಎಣ್ಣೆ ಕಾಳುಗಳು | 10 | ಶೇಂಗಾ | 4220 | 24436 | 5.17 | 4099 | 25193 | 758 | 7 |
| | 11 | ಸೋಯಾ ಅವರೆ | 2775 | 17947 | 6.68 | 3529 | 23585 | 5638 | 3 |
| | 12 | ಸೂರ್ಯಕಾಂತಿ | 3950 | 17032 | 4.28 | 3750 | 16051 | -981 | -1 |
| ವಾಣಿಜ್ಯ ಬೆಳೆಗಳು | 13 | ಹತ್ತಿ | 3860 | 32852 | 7.97 | 4588 | 36569 | 3717 | -6 |
| | 14 | ಒಣಮೆಣಸಿನ ಕಾಯಿ | ಇಲ್ಲ | 50842 | 6.77 | 10535 | 71359 | 20517 | - |
| ತರಕಾರಿ ಬೆಳೆಗಳು | 15 | ಟೊಮೆಟೊ | ಇಲ್ಲ | 105846 | 153.08 | 962 | 147215 | 41369 | - |
| | 16 | ಈರುಳ್ಳಿ | 624 | 33321 | 46.45 | 1067 | 49557 | 16236 | -13 |
| | 17 | ಆಲೂಗೆಡ್ಡೆ | ಇಲ್ಲ | 66503 | 57.62 | 1544 | 88942 | 22439 | - |
| ಹಣ್ಣಿನ ಬೆಳೆಗಳು | 18 | ಬಾಳೆ | ಇಲ್ಲ | 73936 | 97.60 | 1953 | 190992 | 117056 | - |
| | 19 | ದ್ರಾಕ್ಷಿ | ಇಲ್ಲ | 59624 | 73.40 | 3150 | 231210 | 171586 | - |
| | 20 | ದಾಳಂಬೆ | ಇಲ್ಲ | 55021 | 39.70 | 6780 | 269166 | 214145 | - |
| ತೋಟದ ಬೆಳೆಗಳು | 21 | ತೆಂಗು | 8 | 68972 | 6000* | 8 | 48000 | -20972 | -30 |
| | | ಕೊಬ್ಬರಿ | 6240 | 82264 | 9.23 | 7305 | 67428 | -14836 | -30 |
| | 22 | ಕೆಂಪಡಕೆ | 27000 | 130704 | 8.80 | 27000 | 237600 | 106895 | 82 |
| | | ಬಿಳಿಅಡಕೆ | 25100 | 111098 | 10.00 | 20196 | 201960 | 90862 | 126 |
| ಸಾಂಬಾರು ಬೆಳೆಗಳು | 23 | ಶುಂಠಿ | ಇಲ್ಲ | 122894 | 91.31 | 3052 | 278703 | 155809 | - |
| | 24 | ಅರಿಶಿಣ | ಇಲ್ಲ | 85474 | 31.18 | 9507 | 296374 | 210900 | - |
| | 25 | ಕರಿ ಮೆಣಸು | ಇಲ್ಲ | 58309 | 2.81 | 61600 | 173096 | 114787 | - |

* *ತೆಂಗಿನ ಕಾಯಿ (ಸಂಖ್ಯೆಯಲ್ಲಿ), ರೂ/ಕಾಯಿಗೆ*

## 2. ಕೃಷಿ ಮಾರಾಟ ವ್ಯವಸ್ಥೆ

ರೈತರಿಗೆ ಅವರು ಬೆಳೆದ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆಗಳನ್ನು ಒದಗಿಸಿಕೊಡಲು ಅವಕಾಶ ಮಾಡಿಕೊಡುವಂತಹ ವ್ಯವಸ್ಥೆ ಕಲ್ಪಿಸುವುದೇ ಕೃಷಿ ಮಾರುಕಟ್ಟೆಗಳ ಮುಖ್ಯ ಕರ್ತವ್ಯಗಳಾಗಿರುತ್ತವೆ. ಸಿದ್ಧ ವಸ್ತುಗಳ ತಯಾರಕರು ಹಾಗೂ ಸಂಸ್ಕರಣಾಕಾರರು ಕೃಷಿ ಉತ್ಪನ್ನಗಳನ್ನು ಕಚ್ಚಾ ವಸ್ತುಗಳನ್ನಾಗಿ ಉಪಯೋಗಿಸಿಕೊಳ್ಳಲು ಅವುಗಳ ನಿರಂತರ ಪೂರೈಕೆಯನ್ನು ನಿರೀಕ್ಷಿಸುತ್ತಿರುತ್ತಾರೆ. ಇದೇ ರೀತಿಯಾಗಿ ಗ್ರಾಹಕ ಬಳಕೆದಾರರೂ ಸಹ ಕೃಷಿ ಉತ್ಪನ್ನಗಳಿಗೆ ಕೈಗೆಟುಕುವ ನಿಗದಿತ ಬೆಲೆಯನ್ನು ನಿರೀಕ್ಷಿಸುತ್ತಿರುತ್ತಾರೆ. ಭಾರತದ ಕೃಷಿ ಮಾರಾಟ ವ್ಯವಸ್ಥೆ ಬೇಡಿಕೆ ಹಾಗೂ ಪೂರೈಕೆಯ ಆಧಾರದ ಮೇಲೆ ನಡೆಯುತ್ತಿರುತ್ತದೆ. **ಮುಕ್ತ ಮಾರುಕಟ್ಟೆಯಲ್ಲಿ** ಕೃಷಿ ಉತ್ಪನ್ನಗಳ ಬೆಲೆಯು ಚೌಕಾಸಿ ಮಾತುಕತೆಯ ಮೂಲಕವೂ, ಗ್ರಾಮೀಣ ಮಟ್ಟದಲ್ಲೇ ಖರೀದಿಸುವಿಕೆಯಿಂದಲೂ, ಸಗಟು ಮಾರಾಟದ ಮೂಲಕವೂ ಮತ್ತು ಚಿಲ್ಲರೆ ಮಾರಾಟದ ಮೂಲಕವು ವಿವಿಧ ಹಂತಗಳಲ್ಲಿ ನಿರ್ಧರಿಸಲ್ಪಡುತ್ತದೆ. ದಕ್ಷ ಕೃಷಿ ಮಾರಾಟ ಪದ್ಧತಿಯು ಕೆಳಕಂಡ ಕಾರಣಗಳಿಗಾಗಿ ಬಹುಮುಖ್ಯವಾಗುತ್ತವೆ:

(ಅ) ರೈತರು ಉತ್ಪಾದನೆಯನ್ನು ಹೆಚ್ಚಿಸಲು ಅವರಿಗೆ ಪ್ರೋತ್ಸಾಹವನ್ನು ನೀಡಲು,

(ಆ) ಆರ್ಥಿಕ ವ್ಯವಸ್ಥೆಯಲ್ಲಿ ಬದಲಾಗುತ್ತಿರುವ ಉತ್ಪಾದನಾ ಅಗತ್ಯಗಳ ಬಗ್ಗೆ ರೈತರಿಗೆ ತಿಳಿಸಿ, ಅವರುಗಳು ಉತ್ಪಾದನೆ ಬಗ್ಗೆ ಯೋಜಿಸುವಂತೆ ಮಾಡುವುದು,

(ಇ) ಮಾರಾಟಗಾರರಲ್ಲಿ ಸ್ಪರ್ಧಾ ಮನೋಭಾವವನ್ನು ಉಂಟು ಮಾಡುವುದು,

(ಈ) ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಶೋಷಣೆಯಿಂದ ರಕ್ಷಿಸುವುದು.

ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ಕೃಷಿ ಉತ್ಪನ್ನಗಳ ವ್ಯವಸ್ಥಿತಿ ಮಾರಾಟದ ಮೂಲಕ ಉತ್ಪಾದಕರು ಹಾಗೂ ಬಳಕೆದಾರರ ಹಿತವನ್ನು ರಕ್ಷಿಸಲು ಸಕಾರಾತ್ಮಕ ಪಾತ್ರವನ್ನು ವಹಿಸುತ್ತಿದೆ. ಈ ಸಕಾರಾತ್ಮಕ ಪಾತ್ರವು **ನಿಯಂತ್ರಿತ ಮಾರುಕಟ್ಟೆಗಳ ಸ್ಥಾಪನೆ** (ಎಪಿಎಂಸಿಗಳು), ಉಗ್ರಾಣಗಳನ್ನು ನಿರ್ಮಿಸುವುದು, ಉತ್ಪನ್ನಗಳ ಗುಣಮಟ್ಟದ ಶ್ರೇಣಿಯನ್ನು ಹೆಚ್ಚಿಸುವುದು ಮತ್ತು ಪ್ರಮಾಣಿಸುವುದು, ತೂಕ ಮತ್ತು ಅಳತೆಗಳನ್ನು ಪ್ರಮಾಣಿಸುವುದು, ಉತ್ಪನ್ನಗಳ ಬೆಲೆಯ ಬಗ್ಗೆ ಮಾಹಿತಿಯನ್ನು ಒದಗಿಸುವುದು ಇತ್ಯಾದಿ.

ಮಾರುಕಟ್ಟೆಯಲ್ಲಿ ಮಾರಾಟಗಾರರು ಹಾಗೂ ಖರೀದಿದಾರರು ಪೂರೈಕೆ ಹಾಗೂ ಬೇಡಿಕೆಗಳನ್ನು ಪ್ರತಿನಿಧಿಸುತ್ತಾರೆ. ಖರೀದಿದಾರರು ಬೇಡಿಕೆಯನ್ನು ಮತ್ತು ಮಾರಾಟಗಾರರು ಪೂರೈಕೆಯನ್ನು ಪ್ರತಿನಿಧಿಸುತ್ತಾರೆ ಹಾಗೂ ಇಬ್ಬರೂ ಸಹ ಒಂದು ಉತ್ಪನ್ನವನ್ನು ಯಾವುದೇ ಒಂದು ಬೆಲೆಗೆ ಬದಲಾಯಿಸಿಕೊಳ್ಳುವ ಉದ್ದೇಶದಿಂದ ಪರಸ್ಪರ ಸಂಪರ್ಕಕ್ಕೆ ಬರುತ್ತಾರೆ. ಈ ಉತ್ಪನ್ನಗಳನ್ನು ಸ್ಥಳದಲ್ಲಿಯ ಮಾರುಕಟ್ಟೆಯಲ್ಲಿಯೇ ಮಾರಾಟ ಮಾಡಬಹುದು ಅಥವಾ ಬೇರೆ ಯಾವುದಾದರೂ ಮಾರುಕಟ್ಟೆಯಲ್ಲೂ ಸಹ ಮಾರಾಟ ಮಾಡಬಹುದಾಗಿದೆ. ಯಾವ ಮಾರುಕಟ್ಟೆಯಲ್ಲಿ ಉತ್ಪನ್ನಗಳನ್ನು ಕೂಡಲೇ ಮಾರಾಟ ಮಾಡಿ ಹಣವನ್ನೂ ಸಹ ಸ್ಥಳದಲ್ಲಿಯೇ ಪಡೆಯಲಾಗುತ್ತದೆಯೋ ಅಂತಹ ಮಾರುಕಟ್ಟೆಯನ್ನು **ಸ್ಥಳೀಯ/ನಗದು/ಭೌತಿಕ ಮಾರುಕಟ್ಟೆ** (Spot Market) ಎಂದು ಕರೆಯಲಾಗುತ್ತದೆ. ಇಂತಹ ಮಾರುಕಟ್ಟೆಯಲ್ಲಿ ಬೆಲೆಗಳನ್ನು ಸ್ಥಳದಲ್ಲಿಯೇ ನಿರ್ಧರಿಸಿ ಇತ್ಯರ್ಥಪಡಿಸಲಾಗುತ್ತದೆ. ಆದರೆ ಮುಂದಿನ ದಿನಗಳಲ್ಲಿ ಉತ್ಪನ್ನಗಳು ಬಿಕರಿಯಾಗುವ ಅಥವಾ ನಗದು ಇತ್ಯರ್ಥಪಡಿಸುವ ಪ್ರಕ್ರಿಯೆ ನಡೆದ ಪಕ್ಷದಲ್ಲಿ ಅದನ್ನು **ಮುಂದಿನ ಮಾರುಕಟ್ಟೆ** (Forward Trading) ಎಂದು ಕರೆಯಲಾಗುತ್ತದೆ. ಸ್ಥಳದಲ್ಲಿಯೇ ಉತ್ಪನ್ನದ ಬೆಲೆಯು ನಿರ್ಧರಿತವಾದ ಪಕ್ಷದಲ್ಲಿ ಅದು ಭವಿಷ್ಯದ ಬೆಲೆ ಸಂಚಲನವನ್ನು ಹಾಗೂ ಮಾರುಕಟ್ಟೆ ನಿರೀಕ್ಷೆಗಳನ್ನು ವಿವಿಧ ವಿಧಾನಗಳ ಮುಖಾಂತರ

ವ್ಯಕ್ತಪಡಿಸುತ್ತದೆ. ಆದರೆ ಮುಂದಿನ ಮಾರುಕಟ್ಟೆಯಲ್ಲಿ ಉತ್ಪನ್ನಗಳ ಒಪ್ಪಂದ ಬೆಲೆಗಳು ನಿರ್ಧರಿತವಾದರೂ ಸಹ ಸರಕು ಪೂರೈಕೆ ಮತ್ತು ಹಣ ಪಾವತಿಗಳು ಮುಂದಿನ ದಿನಾಂಕಗಳಲ್ಲಿ ಜರುಗುತ್ತವೆ.

## ಅ. ಆನ್‌ಲೈನ್/ಇ–ವ್ಯಾಪಾರ

ಮಾಹಿತಿ ತಂತ್ರಜ್ಞಾನದ ಉಗಮದ ನಂತರ **ಆನ್‌ಲೈನ್ ವ್ಯಾಪಾರ** (ವಿದ್ಯುನ್ಮಾನ ವ್ಯಾಪಾರ) ಪ್ರಾಮುಖ್ಯತೆಯನ್ನು ಗಳಿಸಿಕೊಳ್ಳುತ್ತಿದೆ. ಆನ್‌ಲೈನ್ ವ್ಯಾಪಾರವು ಇಂಟರ್‌ನೆಟ್ ಅನ್ನು ವೇದಿಕೆಯಾಗಿ ಬಳಸಿಕೊಂಡು ಉತ್ಪನ್ನಗಳ ಖರೀದಿಗೆ ಬೇಡಿಕೆ ಹಾಗೂ ಮಾರಾಟದ ಆದೇಶಗಳನ್ನು ಉಂಟು ಮಾಡುವ ಒಂದು ಕ್ರಿಯೆಯಾಗಿದೆ. ಇಲ್ಲಿ ಮಾರಾಟಗಾರರು ತಮ್ಮ ಉತ್ಪನ್ನಗಳ ನಿರ್ದಿಷ್ಟ ಅಂಶಗಳನ್ನು ಅಂದರೆ ಪ್ರಮಾಣ, ಗುಣಮಟ್ಟ, ದೊರೆಯುವ ಸ್ಥಳ, ಪೂರೈಸುವ ದಿನಾಂಕ ಇತ್ಯಾದಿಗಳನ್ನು ಆನ್‌ಲೈನ್ ಪೋರ್ಟಲ್‌ನಲ್ಲಿ ತಿಳಿಯಪಡಿಸುತ್ತಾರೆ. ಖರೀದಿದಾರರು ತಮಗೆ ಅನುಕೂಲವಾದ ಸಮಯದಲ್ಲಿ ಈ ಆನ್‌ಲೈನ್ ಪೋರ್ಟಲ್‌ನಲ್ಲಿ ಪ್ರಕಟವಾಗಿರುವ ಉತ್ಪನ್ನಗಳ ಮಾಹಿತಿಯನ್ನು ಪಡೆದು ತಮಗೆ ಬೇಕಾದ ನಿರ್ದಿಷ್ಟ ಉತ್ಪನ್ನಗಳಿಗೆ ಬೇಡಿಕೆಯನ್ನು ಸಲ್ಲಿಸುತ್ತಾರೆ. ಈ ರೀತಿಯಾಗಿ ಖರೀದಿದಾರರು ಹಾಗೂ ಮಾರಾಟಗಾರರಿಬ್ಬರೂ ಸಹ ತಮ್ಮ ತಮ್ಮ ಖರೀದಿ ಹಾಗೂ ಮಾರಾಟದ ಉದ್ದೇಶಗಳನ್ನು ತಿಳಿಯಪಡಿಸುವ ಅವಕಾಶವು ಇಲ್ಲಿರುತ್ತದೆ. ಇದರಿಂದಾಗಿ ಮಧ್ಯಸ್ಥಿಕೆದಾರರ ಉಪಟಳವನ್ನು ತೆಗೆದು ಹಾಕಬಹುದಾಗಿದೆ ಮತ್ತು ಉತ್ಪನ್ನಗಳನ್ನು ನೇರವಾಗಿ ಲಾಭದಾಯಕ ಬೆಲೆಗಳಿಗೆ ಮಾರಾಟ ಮಾಡಲು ಹಾಗೂ ಸಾಗಣೆ ವೆಚ್ಚವನ್ನು ಕಡಿಮೆಗೊಳಿಸಲು ಸಾಧ್ಯವಾಗುತ್ತದೆ.

**ರೈತರಿಗೆ ಆನ್‌ಲೈನ್/ಇ–ವ್ಯಾಪಾರ:**

ಅ. ಆನ್‌ಲೈನ್ ವ್ಯಾಪಾರವು ಬೆಲೆಯನ್ನು ಕಂಡು ಹಿಡಿದುಕೊಳ್ಳುವುದಕ್ಕೆ ಮತ್ತು ವ್ಯಾಪಾರದಲ್ಲಿ ಪಾರದರ್ಶಕತೆಯನ್ನು ಉಂಟು ಮಾಡುವುದಕ್ಕೆ ನೆರವಾಗುತ್ತದೆ.

ಆ. ಇದು ವ್ಯಾಪಾರಸ್ಥರಲ್ಲಿ ಆರೋಗ್ಯಕರ ಸ್ಪರ್ಧೆಯನ್ನು ಉತ್ತೇಜಿಸುತ್ತದೆ.


ಇ. ಯಾವುದೇ ರೈತರು ತಮಗೆ ಅನುಕೂಲವಾದ ಸಮಯದಲ್ಲಿ ಇದನ್ನು ಗಮನಿಸಿ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಇದು ನೆರವಾಗುತ್ತದೆ.

ಈ. ಆನ್‌ಲೈನ್ ವ್ಯಾಪಾರವು ಮಧ್ಯಸ್ಥಿಕೆದಾರರನ್ನು ತೆಗೆದುಹಾಕುವುದಲ್ಲದೇ ಸಾಗಣೆ ವೆಚ್ಚವನ್ನು ಕಡಿಮೆಗೊಳಿಸುತ್ತದೆ ಹಾಗೂ ರೈತರು ಊಹಿಸಲು ಸಾಧ್ಯವಾದ **ಲಾಭದಾಯಕ ಬೆಲೆ**ಗಳನ್ನು ಪಡೆಯಲು ನೆರವಾಗುತ್ತದೆ.

ಉ. ಜೊತೆಗೆ ಈ ವ್ಯಾಪಾರವು ರೈತರಿಗಾಗಿ ನಿರ್ಬಂಧರಹಿತ ಮಾರುಕಟ್ಟೆಯನ್ನು ಅಭಿವೃದ್ಧಿ ಪಡಿಸಲು ನೆರವಾಗುತ್ತದೆ.

ಮೇಲಿನ ನಕಾಶೆಯಲ್ಲಿ ಕೃಷಿ ಉತ್ಪನ್ನಗಳ ಆನ್‌ಲೈನ್ ವ್ಯಾಪಾರವು ಯಾವ ರೀತಿ ನಡೆಯುತ್ತದೆ ಎಂಬುದನ್ನು ತೋರಿಸಲಾಗುತ್ತದೆ. ಕೃಷಿ ಉತ್ಪನ್ನಗಳ ಮಾರಾಟಗಾರರು (ರೈತರು) ತಮ್ಮ ಉತ್ಪನ್ನಗಳನ್ನು ಎಪಿಎಂಸಿ ಗಳಲ್ಲಿನ ಉಗ್ರಾಣದಲ್ಲಿ ಅಥವಾ ಮಾನ್ಯತೆ ಪಡೆದ ಉಗ್ರಾಣಗಳಲ್ಲಿ ಸಂಗ್ರಹಿಸಿ ಉಗ್ರಾಣ ರಸೀದಿಯನ್ನು ಪಡೆಯುತ್ತಾರೆ. ಈ ಉತ್ಪನ್ನಗಳ ಗುಣಮಟ್ಟ, ಶ್ರೇಣಿ ಮತ್ತು ಪ್ರಮಾಣಗಳನ್ನು ಉಗ್ರಾಣಗಳಲ್ಲಿ ನಿರ್ಧರಿಸಲಾಗುತ್ತದೆ. **ಉಗ್ರಾಣ ರಸೀದಿಯನ್ನು** ರೈತರು ಉಗ್ರಾಣದ ವ್ಯವಸ್ಥಾಪಕರಿಂದ ಪಡೆಯುತ್ತಾರೆ. ನಂತರ ಈ ರೈತ ಮಾರಾಟಗಾರರು ಎಪಿಎಂಸಿಯ

**ನಕಾಶೆ: ಕೃಷಿ ಉತ್ಪನ್ನಗಳ ಆನ್‌ಲೈನ್ ವ್ಯಾಪಾರ**




ಮಾರಾಟ ಅಂಗಳಕ್ಕೆ ಈ ರಸೀದಿಯೊಂದಿಗೆ ಹೋಗಬೇಕಾಗುತ್ತದೆ. ಅಲ್ಲಿ ಉಗ್ರಾಣ ರಸೀದಿಯಲ್ಲಿನ ವಿವರಗಳನ್ನು ವ್ಯಾಪಾರ ಪೋರ್ಟಲ್‌ನಲ್ಲಿ ಬರೆಯಲಾಗುತ್ತದೆ. ಇಲ್ಲಿ ವ್ಯಾಪಾರ ಪೋರ್ಟಲ್ ಒಂದು ಉಪ ಪೋರ್ಟಲ್ ಆಗಿ ಕರ್ತವ್ಯ ನಿರ್ವಹಿಸಲಿದ್ದು, ಕೇಂದ್ರೀಯ ವ್ಯಾಪಾರ ಟರ್ಮಿನಲ್ (ನಿಲ್ದಾಣ) ನಲ್ಲಿ ಈ ಬಗ್ಗೆ ಅಂದರೆ ಮಾರಾಟಕ್ಕಿರುವ ಉತ್ಪನ್ನದ ನಿರ್ದಿಷ್ಟ ವಿವರಗಳನ್ನು ಹೊಂದಿರುತ್ತದೆ. ಖರೀದಿದಾರರು ತಮಗೆ ಯಾವ ಉತ್ಪನ್ನಗಳ ಅವಶ್ಯಕತೆಯಿದೆ ಎಂಬುದನ್ನು ನಿರ್ದಿಷ್ಟಪಡಿಸಿ ಈ ಕೇಂದ್ರೀಯ ಕೃಷಿ ಮಾರಾಟ ಪೋರ್ಟಲ್‌ಗೆ ತಮ್ಮ ನೊಂದಾಯಿತ ಗುರುತಿನ ಚೀಟಿಯೊಂದಿಗೆ ಪ್ರವೇಶ (Login) ವಾಗಬೇಕು. ಖರೀದಿದಾರರ ಅವಶ್ಯಕತೆಯೂ ಮಾರಾಟಗಾರರು ಪಟ್ಟಿಮಾಡಿರುವ ಉತ್ಪನ್ನಗಳೊಂದಿಗೆ ಹೊಂದಾಣಿಕೆಯಾದರೆ ಆಗ ಖರೀದಿದಾರರು ಆ ಉತ್ಪನ್ನದ ಖರೀದಿಗಾಗಿ ತಮ್ಮ ಬೆಲೆ ಸೂಚಿಸುತ್ತಾರೆ. ಖರೀದಿದಾರರ ಸೂಚಿತ ಬೆಲೆಯನ್ನನುಸರಿಸಿ ಮಾರಾಟಗಾರರು ಆ ಬೆಲೆಯನ್ನು ಒಪ್ಪಬೇಕೇ ಅಥವಾ ಬೇಡವೇ ಎಂಬುದನ್ನು ನಿರ್ಧರಿಸುತ್ತಾರೆ. ಮಾರಾಟಗಾರರು ಈ ಬೆಲೆಯನ್ನು ಒಪ್ಪಿಕೊಂಡ ಪಕ್ಷದಲ್ಲಿ ವ್ಯಾಪಾರವು ಆಗುತ್ತದೆ ಮತ್ತು ಆನ್‌ಲೈನ್‌ನಲ್ಲಿ ಹಣ ಸ್ವೀಕರಿಸಿದ ನಂತರ ಖರೀದಿದಾರರಿಗೆ ಮಾರಾಟಗಾರರು ಉಗ್ರಾಣ ರಸೀದಿಯನ್ನು ವರ್ಗಾಯಿಸುತ್ತಾರೆ. ಈ ಪ್ರಕ್ರಿಯೆಯಲ್ಲಿ ಎಪಿಎಂಸಿ ಮಾರಾಟ ಅಂಗಳವು ಬೆಲೆ ನಿರ್ಧರಿಸುವಲ್ಲಿ ಮತ್ತು ಉತ್ಪನ್ನಗಳ ಮಾರಾಟದಲ್ಲಿ ಸೌಲಭ್ಯಕಾರನಾಗಿ ವರ್ತಿಸುತ್ತದೆ. ಖರೀದಿದಾರರು ಉತ್ಪನ್ನಗಳನ್ನು ಉಗ್ರಾಣದಿಂದ ರಸೀದಿಯನ್ನು ಸಲ್ಲಿಸಿ ಪಡೆಯುತ್ತಾರೆ. ರೈತರೂ ಸಹ ತಮ್ಮ ಕೃಷಿ ಕಾರ್ಯಗಳಿಗಾಗಿ ಅಗತ್ಯವಾದ ಹಣವನ್ನು ಆರ್ಥಿಕ ಸಂಸ್ಥೆಗಳಿಂದ (ಬ್ಯಾಂಕ್) ಪಡೆಯಬೇಕಾದಾಗ ಉತ್ಪನ್ನಗಳನ್ನು ಮಾರದೆಯೇ ಅಡವಿಟ್ಟು ಉಗ್ರಾಣ ರಸೀದಿಯನ್ನು ತೋರಿಸಿ ಹಣವನ್ನು ಪಡೆಯಬಹುದಾಗಿದೆ.

## ಆ. ಇ-ಟ್ರೇಡಿಂಗ್ ಜಾರಿಗೊಳಿಸುವ ಬಗ್ಗೆ ಸಮಗ್ರ ಕೃಷಿ ಮಾರಾಟ ನೀತಿ – 2013

ರಾಜ್ಯದಲ್ಲಿ ಕೃಷಿ ಉತ್ಪನ್ನ ಮಾರಾಟ ವ್ಯವಸ್ಥೆಯನ್ನು ಸುಧಾರಣೆ ಮಾಡುವ ದೃಷ್ಟಿಯಿಂದ ಸಹಕಾರ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಯಿತು. ರಾಜ್ಯ ಸರ್ಕಾರದಿಂದ ಮಾರ್ಚ್-2013 ರಲ್ಲಿ ನೇಮಕ ಮಾಡಿದ ಮಾರುಕಟ್ಟೆ ಸುಧಾರಣಾ ಸಮಿತಿಯು ಮೇ-2013 ರಲ್ಲಿ ತನ್ನ ವರದಿಯನ್ನು

ಸಲ್ಲಿಸಿದೆ. ರಾಜ್ಯ ಸರ್ಕಾರವು ಸಮಿತಿಯ ಶಿಫಾರಸ್ಸನ್ನು ಆಧರಿಸಿ **"ಕರ್ನಾಟಕ ಕೃಷಿ ಮಾರಾಟ ನೀತಿ–2013"** ಯನ್ನು ದಿನಾಂಕ 04.09.2013 ರಿಂದ ಜಾರಿಗೆ ತಂದಿರುತ್ತದೆ. ಸುಧಾರಣಾ ಕ್ರಮಗಳನ್ನು ಅನುಷ್ಠಾನಗೊಳಿಸುವ ಸಂಬಂಧ **ವಿಶೇಷ ಸಾಂಸ್ಥಿಕ ವ್ಯವಸ್ಥೆಯನ್ನು** (Special Organisational System) ರಾಷ್ಟ್ರೀಯ ಇ–ಮಾರುಕಟ್ಟೆ ಸರ್ವೀಸಸ್ ಪ್ರೈ.ಲಿ., ಮೂಲಕ ದಿನಾಂಕ 16.11.2013 ರಂದು ಜಾರಿಗೆ ತರಲಾಗಿದೆ. ಕೃಷಿ ಮಾರಾಟ ನೀತಿಯನ್ನು ಅನುಷ್ಠಾನಕ್ಕೆ ತರುವುದರಿಂದ ರೈತರ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಬೆಲೆ ದೊರೆಯುತ್ತದೆ. ಮಾರಾಟದಲ್ಲಿ ಪಾರದರ್ಶಕತೆಯನ್ನು ತರಲು ಮತ್ತು ಮಾರುಕಟ್ಟೆ ಪ್ರಾಂಗಣಗಳಲ್ಲಿ ಜರುಗುವ ವಿವಿಧ ಚಟುವಟಿಕೆಗಳನ್ನು ಸರಳೀಕರಣಗೊಳಿಸಲು ಸಾಧ್ಯವಾಗುತ್ತದೆ.

ರೈತರು ಬೆಳೆದ ಉತ್ಪನ್ನಗಳನ್ನು ಮಾರುಕಟ್ಟೆಗಳಲ್ಲಿ ಎಲೆಕ್ಟ್ರಾನಿಕ್ ವ್ಯಾಪಾರ ಪದ್ಧತಿಯ ಮೂಲಕ ಮಾರಾಟ ಮಾಡಲು ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಮಾರುಕಟ್ಟೆ ಪ್ರಾಂಗಣದಲ್ಲಿ ನಡೆಯುವ ಉತ್ಪನ್ನಗಳ ಹರಾಜು, ಬೆಲೆ ನಿರ್ಧರಣೆ, ರೈತರಿಗೆ ಹಣ ಪಾವತಿ ಮೊದಲಾಗಿ ಚಟುವಟಿಕೆಗಳನ್ನು ಪಾರದರ್ಶಕವಾಗಿ, ಸರಳವಾಗಿ, ರೈತರಿಗೆ ಸ್ಪರ್ಧಾತ್ಮಕ ಧಾರಣೆ ದೊರೆಯುವಂತೆ ತಂತ್ರಜ್ಞಾನವನ್ನು ಅಳವಡಿಸಿ ಆನ್‌ಲೈನ್ ಮುಖಾಂತರ ನಡೆಯುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ. ಇ–ಟ್ರೇಡಿಂಗ್ ವ್ಯವಸ್ಥೆಯಲ್ಲಿ ರಾಜ್ಯದ ವಿವಿಧ ಮಾರುಕಟ್ಟೆಗಳನ್ನು ತಂತ್ರಜ್ಞಾನದ ಸಹಾಯದಿಂದ ಮತ್ತು ಆನ್‌ಲೈನ್ ಮೂಲಕ ಜೋಡಣೆ ಮಾಡಿ ವಿವಿಧ ಮಾರುಕಟ್ಟೆಗಳಲ್ಲಿಯ ಖರೀದಿದಾರರು ರಾಜ್ಯದ ಯಾವುದೇ ಮಾರುಕಟ್ಟೆಯಲ್ಲಿ ಮಾರಾಟಕ್ಕಾಗಿ ರೈತರು ಇಟ್ಟಂತಹ ಉತ್ಪನ್ನಗಳನ್ನು ಖರೀದಿಸಲು ವ್ಯವಸ್ಥೆ ಮಾಡಲಾಗುತ್ತಿದೆ.

2014–15 ನೇ ಸಾಲಿನ ಆಯವ್ಯಯದಲ್ಲಿ ಈ ಯೋಜನೆಯಡಿ ರೂ. 250.00 ಲಕ್ಷ ಅನುದಾನ ಒದಗಿಸಲಾಗಿದ್ದು, ಆಯ್ದ 55 ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿ ಪ್ರಾಥಮಿಕ ವರ್ಗೀಕರಣ ಪ್ರಯೋಗಾಲಯಗಳು ಮತ್ತು ಮಾಹಿತಿ ಕೇಂದ್ರಗಳನ್ನು ಸ್ಥಾಪನೆ ಮಾಡಲು ಕ್ರಮ ಕೈಗೊಂಡು ಆನ್‌ಲೈನ್ ವ್ಯಾಪಾರ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

## ಇ. ಕೃಷಿ ಉತ್ಪನ್ನಗಳ ಗುಂಪು ಮಾರಾಟ

ಕೃಷಿ ಉತ್ಪನ್ನಗಳ ಗುಂಪು ಮಾರಾಟವನ್ನು ಈ ರೀತಿಯಾಗಿ ಅರ್ಥೈಸಬಹುದು: ರೈತರು /ಉತ್ಪಾದಕರು ಗುಂಪೊಂದನ್ನು ರಚಿಸಿಕೊಂಡು ತಮ್ಮ ಉತ್ಪನ್ನಗಳನ್ನು ಸಾಮೂಹಿಕವಾಗಿ ಅಥವಾ ಒಟ್ಟಾಗಿ ಮಾರಾಟ ಮಾಡುವುದು. ಇದರಲ್ಲಿ ವ್ಯಕ್ತಿಗತ ರೈತರು ಗುಂಪಿನ ಸದಸ್ಯರಾಗಿರುತ್ತಾರೆ ಹಾಗೂ ಒಟ್ಟಾರೆ ಚೌಕಾಸಿ ಮಾರಾಟದಿಂದ ಉಂಟಾಗುವ ಅನುಕೂಲಗಳನ್ನು ಪಡೆದುಕೊಳ್ಳುವ ಉದ್ದೇಶವನ್ನು ಹೊಂದಿರುತ್ತಾರೆ. ಈ ಗುಂಪು **"ಪ್ರತಿಯೊಬ್ಬನು ಎಲ್ಲರಿಗಾಗಿ ಹಾಗೂ ಎಲ್ಲರೂ ಪ್ರತಿಯೊಬ್ಬನಿಗಾಗಿ"** ಎಂಬ ಸಹಕಾರಿ ತತ್ವದ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತದೆ. ಮಾರಾಟ ಗುಂಪನ್ನು **"ರೈತ/ಉತ್ಪಾದನಾ ಸಂಘಟನೆ ಅಥವಾ ಸಂಘ"** (Farmer Producers Organization) ಎಂಬುದಾಗಿಯೂ ಇತ್ತೀಚೆಗೆ ಜನಪ್ರಿಯವಾಗಿ ಕರೆಯಲಾಗುತ್ತದೆ. ಈ ಮಾರಾಟ ಗುಂಪಿನ ಆಡಳಿತವನ್ನು ಗುಂಪಿನ ಸದಸ್ಯರಲ್ಲಿ ಆಯ್ಕೆಯಾದವರು ಅಥವಾ ನಾಮ ನಿರ್ದೇಶಿತವಾದವರು ನಡೆಸುತ್ತಾರೆ.

**ಗುಂಪು ಮಾರಾಟದ ಅನುಕೂಲಗಳು**:

ಅ. ಗುಂಪು ಮಾರಾಟವು **ಸಾಮೂಹಿಕ ಚೌಕಾಸಿ**ಯನ್ನು ಮಾಡಲು ರೈತರಿಗೆ ನೆರವಾಗುತ್ತದೆ. ಸಾಮೂಹಿಕವಾಗಿ ಮಾರಾಟ ಮಾಡುವುದರಿಂದ ರೈತರು ತಮ್ಮ ಉತ್ಪನ್ನಕ್ಕೆ ತಾವೇ ಬೆಲೆಯನ್ನು ನಿರ್ಧರಿಸಬಹುದಾಗಿದೆ. ರೈತರು ಹಾಗೂ ರೈತರ ಗುಂಪು ಸೇರಿ ಈ ಬೆಲೆಯನ್ನು ನಿರ್ಧರಿಸಬಹುದು.

ಆ. ಗುಂಪು ಮಾರಾಟವು ಉತ್ಪನ್ನಗಳನ್ನು ಒಂದೆಡೆ ಸೇರಿಸಿ ಬೆಲೆಯನ್ನು ನಿರ್ಧರಿಸಲು ರೈತರಿಗೆ ನೆರವಾಗುತ್ತದೆ.

ಇ. ಎಲ್ಲರೂ ಸೇರಿ ಒಟ್ಟಾಗಿ ಒಂದೇ ಬೆಲೆಗೆ ಉತ್ಪನ್ನವನ್ನು ಮಾರಬಹುದಾದ್ದರಿಂದ **ಬೆಲೆ ಏರಿಳಿತಗಳ** ವಿರುದ್ಧ ರೈತರಿಗೆ ಇದು ರಕ್ಷಣೆಯನ್ನು ಒದಗಿಸುತ್ತದೆ.

ಈ. ಗುಂಪು ಮಾರಾಟವು ಒಟ್ಟಾಗಿ ಸಾಗಣೆ ಮಾಡಲು, ದಾಸ್ತಾನು ಮಾಡಲು, ಮೌಲ್ಯವರ್ಧನೆ ಮಾಡಲು, ಮಾರಾಟ ಮಾಹಿತಿ ದೊರಕಿಸಿಕೊಳ್ಳಲು ಇತ್ಯಾದಿಗಳ ಅನುಕೂಲವನ್ನು ರೈತರಿಗೆ ಒದಗಿಸಿಕೊಡುತ್ತದೆ.

ಉ. ನೇರವಾಗಿ ದೊಡ್ಡ ವ್ಯಾಪಾರಸ್ಥರಿಗೆ, ರಫ್ತುದಾರರಿಗೆ ಹಾಗೂ ಇತರರಿಗೆ ದೊಡ್ಡ ಪ್ರಮಾಣದಲ್ಲಿ ತಮ್ಮ ಉತ್ಪನ್ನಗಳನ್ನು ನೇರವಾಗಿ ಮಾರಾಟ ಮಾಡಬಹುದಾಗಿದೆ.


ಊ. ರೈತರು ಈ ರೀತಿಯ ಗುಂಪು ಮಾರಾಟ ಸಂಘದ ಮೂಲಕ ಸರ್ಕಾರದಿಂದ ದೊರೆಯುವ ಪ್ರೋತ್ಸಾಹ, ರಿಯಾಯಿತಿಗಳು ಮತ್ತು ಕಾರ್ಯಕ್ರಮಗಳ ಅನುಕೂಲಗಳನ್ನು ಪಡೆದು ಯೋಗ್ಯ ಮಾರುಕಟ್ಟೆ ಮೂಲಕ ಲಾಭದಾಯಕ ಬೆಲೆ ಪಡೆಯುವುದಕ್ಕಾಗಿ ಉಪಯೋಗಿಸಿಕೊಳ್ಳಬಹುದಾಗಿದೆ.

**ರೈತ ಉತ್ಪಾದಕ ಸಂಘಟನೆ (Farmer Producers Organization)**: ರೈತರ ಸಾಂಘಿಕ ಶಕ್ತಿ ಅಧಿಕಗೊಳಿಸಲು 2013 ರಲ್ಲಿ ಕೇಂದ್ರ ಸರ್ಕಾರ ಈ ಬಗ್ಗೆ ಸಮಗ್ರ ರಾಷ್ಟ್ರೀಯ ನೀತಿ ಮತ್ತು ಮಾರ್ಗಸೂಚಿ ಹೊರತಂದಿರುತ್ತದೆ. ಇದಕ್ಕೆ ಪೂರಕವಾಗಿ, "**ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್** (NABARD)" ತರಬೇತಿ, ಹಣಕಾಸಿನ ನೆರವು, ಸಾಮರ್ಥ್ಯ ವೃದ್ಧಿ ಹೆಚ್ಚಿಸಿ, ರೈತ ಉತ್ಪಾದಕ ಸಂಘಟನೆಗಳ ನಿರ್ಮಾಣಕ್ಕೆ ಅನುವು ಮಾಡಿಕೊಡಲಿದೆ. ರಾಜ್ಯದ ತೋಟಗಾರಿಕೆ ಇಲಾಖೆ ಈಗಾಗಲೇ ರೈತ ಉತ್ಪಾದಕ ಸಂಘಟನೆಗಳನ್ನು ರಚಿಸಿ "**ಖಾಸಗಿ ಸಹಭಾಗಿತ್ವದ ಸಮಗ್ರ ತೋಟಗಾರಿಕೆ ಅಭಿವೃದ್ಧಿ** (PPP-IHD)" ಪಡಿಸಲು ಕ್ರಮ ಕೈಗೊಂಡಿರುತ್ತದೆ. ಕೃಷಿ ಇಲಾಖೆ ಚಿಂತನೆ ನಡೆಸುತ್ತಿದೆ. ಖಾಸಗಿ ಮತ್ತು ಸ್ವಯಂ ಸೇವಾ ಸಂಸ್ಥೆಗಳೂ ಈ ಬಗ್ಗೆ ಒಲವು ತೋರಿಸುತ್ತಿವೆ. ಈ ಎಲ್ಲಾ ಪ್ರಯತ್ನಗಳಿಂದ ರೈತರು ಸಹಕಾರಿ ತತ್ವದಡಿ ಒಗ್ಗೂಡಿ ಸಂಸ್ಕರಣೆ, ಮೌಲ್ಯವರ್ಧನೆ, ಮಾರಾಟ ಕೈಗೊಂಡು ಗ್ರಾಹಕರು ನೀಡುವ ಬೆಲೆಯಲ್ಲಿ ಅಧಿಕ ಮತ್ತು ನ್ಯಾಯಯುತ ಪಾಲನ್ನು ಪಡೆಯುವಂತಾಗಲು ಕರ್ನಾಟಕ ಇಂದು ಮಾರುಕಟ್ಟೆ ಕಾರ್ಯದಲ್ಲಿ ಕ್ರಾಂತಿಯನ್ನೇ ಸಾಧಿಸಬೇಕಾಗಿದೆ.

## ಈ. ಉತ್ಪನ್ನಗಳ ವಾಯಿದೆ ವ್ಯಾಪಾರ (Commodity Trading)

ಉತ್ಪನ್ನಗಳ ಮಾರುಕಟ್ಟೆಯಲ್ಲಿ ಉಂಟಾಗುವ ಬೆಲೆ ವೈಪರೀತ್ಯಗಳು ಕೃಷಿ ಉತ್ಪನ್ನಗಳ ವಿವಿಧ ಭಾಗೀದಾರರಿಗೆ ಅಸ್ಥಿರ ಮತ್ತು ಅನಿಶ್ಚಿತ ಆದಾಯವನ್ನು ಒದಗಿಸುತ್ತದೆ. ಈ ಭಾಗೀದಾರರು ರೈತರು ಮಾತ್ರವಲ್ಲದೆ ವ್ಯಾಪಾರಸ್ಥರು, ಸಂಸ್ಕರಣೆದಾರರು/ಉತ್ಪಾದಕ ಕಂಪನಿಗಳು, ಬಳಕೆದಾರರು ಹಾಗೂ ಸರ್ಕಾರ ಕೂಡ ಆಗಿರುತ್ತಾರೆ. ಈ ಬೆಲೆ ವೈಪರೀತ್ಯವು ಸಾಮಾನ್ಯವಾಗಿ ಬೆಲೆ ಕುಸಿತಕ್ಕೆ ಕಾರಣವಾಗಿ ಎಲ್ಲಾ ಭಾಗೀದಾರರಿಗೂ ಪ್ರತಿಕೂಲ ಪರಿಣಾಮವನ್ನು ಉಂಟು ಮಾಡಿದರೂ ಸಹ ವಿಶೇಷವಾಗಿ ರೈತರನ್ನು ಬಾಧಿಸುತ್ತದೆ. ಈ ನಿಟ್ಟಿನಲ್ಲಿ ಉತ್ಪನ್ನಗಳ ವಾಯಿದೆ ವ್ಯಾಪಾರದ ಪ್ರಮುಖ ಅಂಶಗಳಾದ **ಸಂಸ್ಕರಿತ ಪದಾರ್ಥಗಳ** (Derivative) ಪಾತ್ರವು ಬೆಲೆ ಕುಸಿತಕ್ಕೆ **ಬೇಲಿ ಹಾಕುವುದಕ್ಕೆ** (Hedging) ಬಹಳ ಮುಖ್ಯವಾಗಿರುತ್ತದೆ. ಈ ಸಂಸ್ಕರಿತ ಉತ್ಪನ್ನಗಳನ್ನು **ಭವಿಷ್ಯದ/ಮುಂದುವರಿದ ವ್ಯಾಪಾರ** (Future/Forward Trading) ವೆಂದು ಜನಪ್ರಿಯವಾಗಿ ಕರೆಯಲಾಗಿದೆ.

## ನಕಾಶೆ: ಲಾಭದಾಯಕ ಬೆಲೆ ಗಳಿಸಲು ಗುಂಪು ಮಾರಾಟದ ಮಾದರಿ (ಸಾಂಬಾರು ಬೆಳೆಗಳು)



ಈ ರೀತಿಯ ಸಂಸ್ಕರಿತ ಉತ್ಪನ್ನಗಳ ವ್ಯಾಪಾರ ಒಂದು ಭೌತಿಕ ಉತ್ಪನ್ನದ ಮೌಲಿಕ ಒಪ್ಪಂದವಾಗಿರುತ್ತದೆ. ಉತ್ಪನ್ನಗಳ ವಾಯಿದೆ ವ್ಯಾಪಾರಗಳು ಗೊತ್ತುಪಡಿಸಿದ ಉತ್ಪನ್ನದ ಮಾರಾಟಕ್ಕಾಗಿ ಖರೀದಿದಾರರು ಹಾಗೂ ಮಾರಾಟಗಾರರು ಮಾಡಿಕೊಂಡ ಒಪ್ಪಂದವಾಗಿದ್ದು, ಈ ಮೂಲಕ ಬೆಲೆ ನಿರ್ಧರಿಸಿ ಮುಂದಿನ ದಿನಾಂಕಕ್ಕೆ ಉತ್ಪನ್ನವನ್ನು ಮಾರುವುದಾಗಿರುತ್ತದೆ. ಈ ವಾಯಿದೆ ವ್ಯಾಪಾರದ ಮುಖ್ಯ ಕರ್ತವ್ಯವು (ಅ) ಸೂಕ್ತ ಬೆಲೆ ಕಂಡು ಹಿಡಿದುಕೊಳ್ಳುವಿಕೆ (Price Discovery) ಮತ್ತು (ಆ) ಬೆಲೆ ವೈಪರೀತ್ಯ ಸಮರ್ಥ ನಿರ್ವಹಣೆ ಆಗಿರುತ್ತದೆ.

**ಭವಿಷ್ಯದ ಉತ್ಪನ್ನಗಳು** (Commodity Future) ಎಂದರೆ ಸಾರ್ವಜನಿಕವಾಗಿ ಎಲೆಕ್ಟ್ರಾನಿಕ್ ಚಿತ್ತಿ ಪತ್ರದಲ್ಲಿ ಕೃಷಿ ಉತ್ಪನ್ನಗಳ ಕೈಬದಲಾಯಿಸಿಕೊಳ್ಳುವಿಕೆಯ ಒಪ್ಪಂದ ಎನ್ನಬಹುದು. ಇದನ್ನು ಬೆಲೆಗಳ ಏರುಪೇರಿನ ಸಂದರ್ಭದಲ್ಲಿ **ಬೇಲಿಯಾಗಿ** (Hedging) ಕೂಡಾ ಉಪಯೋಗಿಸಬಹುದು. ಜೊತೆಗೆ ಇದು ಕೃಷಿ ಉತ್ಪನ್ನಗಳ ಸ್ಪರ್ಧಾತ್ಮಕ ಬೆಲೆ ನಿರ್ಧರಣೆಗಾಗಿ ಹಾಗೂ ಪಾರದರ್ಶಕತೆಗಾಗಿಯೂ ಉಪಯುಕ್ತವಾಗಲಿದೆ. ಉತ್ಪನ್ನಗಳ ಸ್ವಲ್ಪ ದಿನಗಳ ನಂತರದ ಬೆಲೆಗಳನ್ನು ಇದು ವಿನಿಮಯ ನಿಲ್ದಾಣದ ಮೂಲಕ ತಿಳಿಯಪಡಿಸುತ್ತದೆ. ಒಬ್ಬ ರೈತ ತನ್ನ ಉತ್ಪನ್ನಗಳ ಬೆಲೆ ಇಳಿಯಬಹುದೆಂದು ನಿರೀಕ್ಷಿಸಿದ ಪಕ್ಷದಲ್ಲಿ ಬೆಲೆ ಏರುಪೇರಿನಿಂದ ತನ್ನನ್ನು ರಕ್ಷಿಸಿಕೊಳ್ಳಲು ಭವಿಷ್ಯದ ಉತ್ಪನ್ನಗಳ ಒಪ್ಪಂದಕ್ಕೆ ಮೊರೆ ಹೋಗಬಹುದಾಗಿದೆ. ಭವಿಷ್ಯದ ಉತ್ಪನ್ನ ಒಪ್ಪಂದವು ಮಾರಾಟ ಬೆಲೆಯನ್ನು ಭದ್ರಪಡಿಸುವುದರಿಂದ ಬೆಲೆ ಕುಸಿತದ ಅಪಾಯವು ರೈತರಿಗೆ ಒದಗದಂತೆ ರಕ್ಷಿಸುತ್ತದೆ. ರೈತರಿಗೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಸಾಧ್ಯವಾಗದಿದ್ದ ಪಕ್ಷದಲ್ಲಿ ಒಪ್ಪಂದದ ಕೊನೆಯ ದಿನದ ಒಳಗೆ ಒಪ್ಪಂದದಿಂದ ಹಿಂದೆ ಸರಿಯುವ ಅವಕಾಶವೂ ಸಹ ಇದರಲ್ಲಿ ಇದೆ. ಭವಿಷ್ಯದ ಮಾರುಕಟ್ಟೆ ಒಪ್ಪಂದವು ಪ್ರತಿಕೂಲ ಪರಿಸ್ಥಿತಿಯಲ್ಲಿ ರೈತರಿಗೆ ರಕ್ಷಣೆ ನೀಡುತ್ತದೆ. ಕೊಡು ಕೊಳ್ಳುವಿಕೆಯನ್ನು ಮಾಡುವ ಕೇಂದ್ರವು ಮಾರಾಟಗಾರರಿಗೆ ಹಾಗೂ ಖರೀದಿಗಾರರಿಗೆ ಇಬ್ಬರಿಗೂ ಒಪ್ಪಂದವು ಪೂರ್ಣವಾಗುವ ಭರವಸೆ ನೀಡುತ್ತದೆ. ಜೊತೆಗೆ ಈ ಕೇಂದ್ರವು ಮಾರಾಟಗಾರರು ಅಥವಾ ಖರೀದಿದಾರರು ಮಾತಿಗೆ ತಪ್ಪಿದಲ್ಲಿ ಅಂತಹ ಪ್ರಕರಣಗಳನ್ನು ಇತ್ಯರ್ಥಪಡಿಸುವ ಹೊಣೆಗಾರಿಕೆಯನ್ನು ಸಹ ವಹಿಸಿಕೊಳ್ಳುತ್ತದೆ. ಈ ರೀತಿ ಭವಿಷ್ಯದ ಉತ್ಪನ್ನಗಳ ಒಪ್ಪಂದಗಳನ್ನು ಕೊಡು ಕೊಳ್ಳುವಿಕೆ ಕೇಂದ್ರಗಳಲ್ಲಿ ನೊಂದಾಯಿಸಿಕೊಳ್ಳಲು ಕಡಿಮೆ ಹಣ ಬೇಕಾಗುತ್ತದೆ.

ಈ ರೀತಿ ಭವಿಷ್ಯದ ಉತ್ಪನ್ನಗಳ ಆಯ್ಕೆಗಳು ಬೆಲೆಗಳ ಏರುಪೇರುಗಳನ್ನು ಸರಿಪಡಿಸುವುದಕ್ಕಾಗಿ ಎರಡು ರೀತಿಯಲ್ಲಿ ಉಪಯೋಗಿಸಬಹುದಾಗಿದೆ. ಅವೆಂದರೆ "**ಕರೆ ಆಯ್ಕೆಗಳು** (Call Option) **ಮತ್ತು ಪುಟ್ ಆಯ್ಕೆಗಳು** (Put Option)". ಕರೆ ಆಯ್ಕೆಯು ದೂರವಾಣಿಯ ಮೂಲಕ ಕರೆ ಮಾಡಿದ ಖರೀದಿದಾರನಿಗೆ ಮಾರಾಟಕ್ಕಿರುವ ಉತ್ಪನ್ನವನ್ನು ಇಂತದ್ದೇ ಸ್ಥಳದಲ್ಲಿ ಹಾಗೂ ಇಂತದ್ದೇ ಭವಿಷ್ಯದ ದಿನಾಂಕದಲ್ಲಿ ಖರೀದಿಸುವ ಹಕ್ಕನ್ನು ಕೊಡುತ್ತದೆಯಾದರೂ ಬದ್ಧತೆಯನ್ನು ವಿಧಿಸುವುದಿಲ್ಲ. ತನ್ನ ಉತ್ಪನ್ನಗಳಿಗೆ ಹೆಚ್ಚಿನ ಬೆಲೆಯನ್ನು ನಿರೀಕ್ಷಿಸುವ ರೈತ ಇಂತಹ ಕರೆ ಆಯ್ಕೆ ಒಪ್ಪಂದವನ್ನು ಖರೀದಿಸಬಹುದಾಗಿದೆ ಹಾಗೂ ಭವಿಷ್ಯದ ದಿನಾಂಕದಲ್ಲಿ ತನ್ನ ಉತ್ಪನ್ನಗಳಿಗೆ ಹೆಚ್ಚಿನ ಬೆಲೆಯನ್ನು ದೊರಕಿಸಿಕೊಳ್ಳಬಹುದಾಗಿದೆ. ಇಂತಹ ಒಪ್ಪಂದದಲ್ಲಿ ರೈತರಿಗೆ ಖರೀದಿಸಲೇ ಬೇಕಾದ ಅಥವಾ ಮಾರಲೇ ಬೇಕಾದ ಅಥವಾ ಉತ್ಪನ್ನಗಳನ್ನು ಪೂರೈಸಲೇ ಬೇಕಾದ ಬದ್ಧತೆಯು ಇರುವುದಿಲ್ಲ. ಇದರಲ್ಲಿ ಇರುವ ಒಂದೇ ತೊಂದರೆ ಎಂದರೆ ಕರೆ ಕಂತಿನ ಮೊತ್ತ ಮಾತ್ರ. ಹೀಗಿದ್ದರೂ ಸಹ ರೈತರು ಈ ರೀತಿಯ ಒಪ್ಪಂದಗಳಿಂದ ಉತ್ಪನ್ನಗಳ ಬೆಲೆ ಏರುಪೇರಿನಿಂದ ರಕ್ಷಿಸಿಕೊಳ್ಳಬಹುದು. ಇದೇ ರೀತಿ ಪುಟ್ ಆಯ್ಕೆಯು ಮಾರಾಟಗಾರರಿಗೆ ಖರೀದಿಯ ಅವಕಾಶ ದೊರಕಿಸಿಕೊಡುತ್ತಾದರೂ ಇಂತದ್ದೇ ಸ್ಥಳದಲ್ಲಿ ಮತ್ತು ಇಂತದ್ದೇ ದಿನಾಂಕದಲ್ಲಿ ಹಾಗೂ ಇಂತದ್ದೇ ಬೆಲೆಗೆ ಭವಿಷ್ಯದ ದಿನಾಂಕದಲ್ಲಿ ಮಾರಾಟ ಮಾಡಲೇ ಬೇಕೆಂಬ ಬದ್ಧತೆಯನ್ನು ವಿಧಿಸುವುದಿಲ್ಲ. **ಭಾರತೀಯ ಉತ್ಪನ್ನ ವಿನಿಮಯ ಕೇಂದ್ರ**ಗಳಲ್ಲಿ ಕೃಷಿಗೆ ಸಂಬಂಧಿಸಿದ ಈ ಉತ್ಪನ್ನ ಆಯ್ಕೆಗಳನ್ನು ಅತಿ ಶೀಘ್ರದಲ್ಲಿಯೇ ಪರಿಚಯಿಸಲಾಗುತ್ತದೆ.

**ಭವಿಷ್ಯದ ಉತ್ಪನ್ನಗಳ ವೈಶಿಷ್ಟ್ಯಗಳು:**

1. **ವ್ಯವಸ್ಥಿತ**: ಭವಿಷ್ಯದ ಉತ್ಪನ್ನಗಳನ್ನು ವ್ಯವಸ್ಥಿತ ಶೇರು ವಿನಿಮಯ ಕೇಂದ್ರಗಳು ಅಂದರೆ ಎನ್‌ಸಿಡಿಎಕ್ಸ್, ಎಂಸಿಎಕ್ಸ್ ಇತ್ಯಾದಿಗಳ ಮೂಲಕ ವ್ಯಾಪಾರ ಮಾಡಲಾಗುತ್ತದೆ.

2. **ಪ್ರಮಾಣಿತ**: ಭವಿಷ್ಯದ ಉತ್ಪನ್ನಗಳನ್ನು ಬಹಳ ಹೆಚ್ಚಿನದಾಗಿ ಪ್ರಮಾಣೀಕರಿಸಲಾಗುತ್ತದೆ ಹಾಗೂ ಅವುಗಳ ಗುಣಮಟ್ಟ, ಪ್ರಮಾಣ, ಶ್ರೇಣಿ, ಪ್ರಾರಂಭದ ದಿನಾಂಕ, ಅವಧಿ ಮುಗಿಯುವಿಕೆ ಇತ್ಯಾದಿಗಳನ್ನು ನಿರ್ದಿಷ್ಟವಾಗಿ ತಿಳಿಸಲಾಗಿರುತ್ತದೆ.

3. **ಪ್ರತಿಪಕ್ಷದ ತೊಂದರೆ ಇಲ್ಲದಿರುವಿಕೆ**: ಭವಿಷ್ಯದ ಉತ್ಪನ್ನಗಳು ಪ್ರತಿಪಕ್ಷದ ತೊಂದರೆ (Counter Party Risk) ಯನ್ನು ತೆಗೆದು ಹಾಕುತ್ತವೆ. ಉತ್ಪನ್ನಗಳ ವಿನಿಮಯ ಕೇಂದ್ರವು ಎರಡು ಪಕ್ಷದವರಿಗೂ ಒಪ್ಪಂದವನ್ನು ಪೂರ್ಣಗೊಳಿಸುವ ಭರವಸೆಯನ್ನು ನೀಡುತ್ತದೆ. ಜೊತೆಗೆ ವ್ಯಾಪಾರಸ್ಥರಿಗೆ ಭವಿಷ್ಯದ ದಿನಾಂಕದಲ್ಲಿ ತಮ್ಮ ನಿಲುವುಗಳನ್ನು ಬದಲಿಸಿಕೊಳ್ಳಲೂ ಸಹ ಅವಕಾಶ ನೀಡುತ್ತದೆ.

4. **ಕಡಿಮೆ ಮೊತ್ತದ ಒಪ್ಪಂದ ಕಂತು**: ಭವಿಷ್ಯದ ಉತ್ಪನ್ನಗಳನ್ನು ಒಪ್ಪಂದದ ಪೂರ್ಣಪ್ರಮಾಣದಲ್ಲಿ ಮಾರಬೇಕಿಲ್ಲ ಅಥವಾ ಖರೀದಿಸಬೇಕಿಲ್ಲ. ಭವಿಷ್ಯದ ವ್ಯಾಪಾರ ಒಪ್ಪಂದಗಳನ್ನು ಪ್ರಾರಂಭಿಸುವ ಅವಧಿಯಲ್ಲಿ ಕಟ್ಟಬೇಕಾದ ಸಣ್ಣ ಪ್ರಮಾಣದ ಮೊತ್ತದ ಮೂಲಕ ಮಾಡಬಹುದಾಗಿದೆ.

5. **ನಿಲುವನ್ನು ಬದಲಿಸಿಕೊಳ್ಳುವಿಕೆ**: ಭವಿಷ್ಯದ ಉತ್ಪನ್ನಗಳ ಒಪ್ಪಂದಗಳನ್ನು ಖರೀದಿದಾರರು ಹಾಗೂ ಮಾರಾಟಗಾರರು ಒಪ್ಪಂದದ ಅವಧಿಯು ಮುಗಿದ ನಂತರ ಪೂರೈಸಲು ಅಥವಾ ಖರೀದಿಸಲು ಇಷ್ಟಪಡದೇ ಇದ್ದ ಪಕ್ಷದಲ್ಲಿ ತಮ್ಮ ನಿಲುವನ್ನು ಬದಲಿಸಿಕೊಳ್ಳಬಹುದಾಗಿದೆ. ಎರಡು ಪ್ರತಿಪಕ್ಷಗಳೂ ಸಹ ತಮ್ಮ ನಿಲುವನ್ನು ಅವಧಿ ದಿನಾಂಕ ಮುಗಿಯುವ ಮುನ್ನವೇ ಬದಲಿಸಿಕೊಳ್ಳಬಹುದಾಗಿದೆ.


6. **ನಿಯಂತ್ರಿತ ಮಾರುಕಟ್ಟೆ**: ಭವಿಷ್ಯದ ಉತ್ಪನ್ನ ಒಪ್ಪಂದವು **ಭಾರತೀಯ ಶೇರು ಭದ್ರತೆಗಳು ಮತ್ತು ವಿನಿಮಯ ಮಂಡಳಿ** (Securities & Exchange Board of India) ಯಿಂದ ನಿಯಂತ್ರಣಕ್ಕೊಳಪಟ್ಟಿರುತ್ತದೆ.

7. **ಬೆಲೆ ಕಂಡು ಹಿಡಿಯುವಿಕೆ**: ಭವಿಷ್ಯದ ಉತ್ಪನ್ನಗಳ ಒಪ್ಪಂದಗಳು ಬೆಲೆಗಳನ್ನು ಪಾರದರ್ಶಕವಾಗಿ ಹಾಗೂ ಸ್ಪರ್ಧಾತ್ಮಕ ಪರಿಸರದಲ್ಲಿ ಕಂಡು ಹಿಡಿಯಲು (Price Discovery) ನೆರವಾಗುವುದಲ್ಲದೇ ಈ ರೀತಿಯ ಬೆಲೆ ನಿರ್ಧರಿಕೆಯು ರೈತರಿಗೆ ನೆರವಾಗುವಂತೆ ಮಾಡುತ್ತವೆ.

8. **ಬೆಲೆ ಏರುಪೇರಿನ ನಿರ್ವಹಣೆ**: ಭವಿಷ್ಯದ ಮಾರುಕಟ್ಟೆಯ ಒಪ್ಪಂದಗಳು ಕಡಿಮೆ ಮೊತ್ತದ ಒಪ್ಪಂದ ಕಂತಿನ ಮೂಲಕ ಬೆಲೆ ಏರುಪೇರನ್ನು ನಿರ್ವಹಿಸಲು ನೆರವಾಗುತ್ತವೆ.

9. **ನಿರ್ಧರಿಸುವಿಕೆ**: ಈ ಒಪ್ಪಂದಗಳು ರೈತರು ಸಾಗುವಳಿಯ ಕಟಾವು, ದಾಸ್ತಾನು ಮಾಡುವಿಕೆಯ ಬಗ್ಗೆ ಮತ್ತು ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವ ಹಾಗೂ ಆಸ್ತಿಯ ದ್ರವೀಕರಣದ ಬಗ್ಗೆ ನಿರ್ಧಾರ ಕೈಗೊಳ್ಳಲೂ ಸಹ ನೆರವಾಗುತ್ತವೆ.

**ನಕಾಶೆ: ಉತ್ಪನ್ನಗಳ ವ್ಯಾಪಾರ (ಭವಿಷ್ಯದ ಹಾಗೂ ಆಯ್ಕೆಗಳ)**




ಭವಿಷ್ಯದ ಉತ್ಪನ್ನಗಳು ಸ್ಪಷ್ಟ ಒಪ್ಪಂದ ನಿರ್ದಿಷ್ಟತೆಗಳನ್ನು ಅಂದರೆ ಒಪ್ಪಂದ ಪ್ರಾರಂಭವಾಗುವ ದಿನಾಂಕ/ಮುಗಿಯುವ ದಿನಾಂಕ/ಉತ್ಪನ್ನದ ಗಾತ್ರ/ನಿರೀಕ್ಷಿತ ದರ/ಒಪ್ಪಂದಕ್ಕಾಗಿ ಕಟ್ಟಬೇಕಾದ ಠೇವಣಿ ಇತ್ಯಾದಿಗಳನ್ನು ಒಳಗೊಂಡಿರಬೇಕು. ಸಣ್ಣ ಪ್ರಮಣದ ಉತ್ಪನ್ನಗಳನ್ನು ಹೊಂದಿರುವ ರೈತರು ಈ ನಿರ್ದಿಷ್ಟತೆಗಳನ್ನೆಲ್ಲಾ ಪೂರೈಸಲು ಕಷ್ಟ ಸಾಧ್ಯವಾಗುತ್ತದೆ. ಆದ್ದರಿಂದ ರೈತರು ಸಹಕಾರಿ ಸಂಘಗಳು, ಉತ್ಪಾದಕರ ಗುಂಪು/ಸಂಘಗಳು ಇತ್ಯಾದಿಗಳ ಮೂಲಕ ಒಟ್ಟಾದರೆ ಬೆಲೆ ವೈಪರೀತ್ಯದ ನಿರ್ವಹಣೆಯನ್ನು ಮಾಡಿಕೊಂಡು ನಿರಾಳವಾಗಬಹುದಾಗಿದೆ.

**ಹೆಚ್ಚಿನ ವಿವರಗಳಿಗೆ:**

**ಡಾ. ವಿಜಯ್‌ಕುಮಾರ್**, ಸಹಾಯಕ ಪ್ರಾಧ್ಯಾಪಕರು,
ಭಾರತೀಯ ತೋಟಗಾರಿಕೆ ವ್ಯವಸ್ಥಾಪಕ ಸಂಸ್ಥೆ (ಐಐಪಿಎಂ),
ಜ್ಞಾನಭಾರತಿ ಕ್ಯಾಂಪಸ್, ಮಲ್ಲತ್ತಳ್ಳಿ ಅಂಚೆ,
ಬೆಂಗಳೂರು-560056
**ಫೋ:** 080-23212647/2321716
**ಇ-ಮೇಲ್:** v.kumariipmb@gmail.com

## ೩. ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿಯ ನಿಟ್ಟಿನಲ್ಲಿ ಕೃಷಿ ಬೆಲೆ ಆಯೋಗದ ಪ್ರಾಯೋಗಿಕ ಕಾರ್ಯಯೋಜನೆ

- ರಾಜ್ಯದ ವಿವಿಧ ಕೃಷಿ ಪರಿಸರ ವಲಯಗಳ ಎಂಟು ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡಿದ್ದು, ಆಯಾ ಜಿಲ್ಲೆಗಳ ವ್ಯಾಪ್ತಿಯ ಕೃಷಿ ವಿಜ್ಞಾನ ಕೇಂದ್ರಗಳು/ವಿಸ್ತರಣಾ ಶಿಕ್ಷಣ ಘಟಕಗಳ ಮೂಲಕ ಜಿಲ್ಲಾಡಳಿತದ ಸಂಪೂರ್ಣ ಮೇಲುಸ್ತುವಾರಿಯಲ್ಲಿ ಈ ಯೋಜನೆಯ ಅನುಷ್ಠಾನವನ್ನು ಯೋಜಿಸಲಾಗಿದೆ.

- **ಈ ಎಲ್ಲಾ ಕಾರ್ಯಕ್ರಮಗಳ ಮೂಲಕ ಕೇಂದ್ರ ಸರ್ಕಾರವು ಪ್ರಸ್ತಾಪಿಸಿರುವ ರೈತರ ಆದಾಯವನ್ನು ದ್ವಿಗುಣಗೊಳಿಸುವ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಿ, ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಕಾರ್ಯಗತಗೊಳಿಸಬಹುದಾದ ಯೋಜನೆಯ ನೀಲಿ ನಕ್ಷೆಯನ್ನು ತಯಾರಿಸಿ ಮುಂದಿಡಲಾಗುವುದು.**

- ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರು (ಪ್ರಧಾನ ಅಧ್ಯಯನಕಾರರು) ತಮ್ಮ ವ್ಯಾಪ್ತಿಯಲ್ಲಿನ ಸೂಕ್ತ **ಪ್ರಾತಿನಿಧಿಕ ಗ್ರಾಮವೊಂದನ್ನು** ಆಯ್ಕೆ ಮಾಡಿ, **ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿನ** ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳು, ರೈತರು, ತಜ್ಞರ ಸಭೆಯಲ್ಲಿ ಒಪ್ಪಿಗೆ ಪಡೆಯಲಿದ್ದಾರೆ. ನಂತರ ಆಯ್ಕೆ ಮಾಡಿದ ಗ್ರಾಮದಲ್ಲಿ ರೈತರನ್ನು ಸಮಾವೇಶಗೊಳಿಸಿ ಅವರ ಸಹಮತವನ್ನೂ ಸಹ ಪಡೆದು ತಾಂತ್ರಿಕ ಕಾರ್ಯಾಗಾರದಲ್ಲಿ ಅನುಷ್ಠಾನದ ರೂಪುರೇಷೆಗಳನ್ನು ರೂಪಿಸಲಿದ್ದಾರೆ.

- ಆಯ್ಕೆಯಾದ ಗ್ರಾಮದ **ಎಲ್ಲೆಗೆರೆ ಸಮೀಕ್ಷೆ (Baseline Survey) ಯನ್ನು** ಬೆಂಗಳೂರಿನ **ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯು** ಆಯಾ ಕೃಷಿ ವಿಜ್ಞಾನ ಕೇಂದ್ರದ ತಾಂತ್ರಿಕ ಸಹಾಯದಿಂದ ಕೈಗೊಂಡು, ವಿಶ್ಲೇಷಿಸಿ, ಫಲಿತಾಂಶವನ್ನು ನೀಡುತ್ತದೆ.

- ಎಲ್ಲೆಗೆರೆ ಸಮೀಕ್ಷೆ ಫಲಿತಾಂಶದ ಆಧಾರದ ಮೇಲೆ **ಹಳ್ಳಿಯ ಪ್ರತಿ ಕುಟುಂಬದ ಆದಾಯ ಮತ್ತು ಕಲ್ಯಾಣ ವೃದ್ಧಿಯ ನೀಲಿ ನಕ್ಷೆಯನ್ನು** ತಯಾರಿಸಿ ನಂತರ ಆಯ್ದ ರೈತ ಕುಟುಂಬಗಳಿಗೆ ಅತ್ಯಂತ ಸೂಕ್ತವಾದ **ಸಮಗ್ರ ಕೃಷಿ ಪದ್ಧತಿಗಳನ್ನು** (Integrated Farming System) ತಯಾರಿಸಲಾಗುತ್ತದೆ.


- **ಕೃಷಿ ವಿಜ್ಞಾನ ಕೇಂದ್ರವು ಗ್ರಾಮದ ಕನಿಷ್ಠ ೨೫ ಮಂದಿ ಪ್ರಗತಿಶೀಲ, ಉತ್ಸಾಹಿ ತರುಣ ರೈತರನ್ನು (ಮಹಿಳೆಯರೂ ಸೇರಿದಂತೆ) ಗುರುತಿಸಿ, ಕಾರ್ಯಾಗಾರ, ತರಬೇತಿ, ಶಿಕ್ಷಣ, ಪ್ರವಾಸ ಇತ್ಯಾದಿಗಳ ಮೂಲಕ ಕೃಷಿಯ ಬಗೆಗಿನ ಮೂಲ ಮನೋಭಾವ ಹಾಗೂ ದೃಷ್ಟಿಕೋನವನ್ನು ಆಶಾದಾಯಕವಾಗಿ ಪರಿವರ್ತಿಸುವ ಕಾರ್ಯಮಾಡುತ್ತದೆ.**

- ಜಿಲ್ಲಾ ಆರೋಗ್ಯ ಅಧಿಕಾರಿಗಳ ಮೂಲಕ **೪೦ ವರ್ಷಕ್ಕೆ ಮೇಲ್ಪಟ್ಟ ಎಲ್ಲಾ ರೈತರ ಪ್ರಾಥಮಿಕ ಆರೋಗ್ಯ** ತಪಾಸಣೆಯನ್ನು ಮಾಡಿಸಲಾಗುವುದು. ಹಾಗೂ ಗ್ರಾಮದ ಪ್ರತಿ ಕೃಷಿ ಭೂಮಿಯ ಮಣ್ಣು ಆರೋಗ್ಯ ತಪಾಸಣೆ ಕೂಡಾ ಮಾಡಿಸಲಾಗುವುದು.

- **ಚಿತ್ರದುರ್ಗ ಜಿಲ್ಲೆಯಲ್ಲಿ ಸಿರಿಧಾನ್ಯ ಹಾಗೂ ಅರಣ್ಯ ಕೃಷಿ ಆಧಾರಿತ ಸಮಗ್ರ ಕೃಷಿ; ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಡಿಕೆ, ತೆಂಗು, ಮಳೆಯಾಶ್ರಿತ ಭತ್ತ ಹಾಗೂ ಮೀನುಗಾರಿಕೆ ಆಧಾರಿತ ಸಮಗ್ರ ಕೃಷಿ; ಕಲಬುರಗಿ ಜಿಲ್ಲೆಯಲ್ಲಿ ದ್ವಿದಳಧಾನ್ಯ ಆಧಾರಿತ ಸಮಗ್ರ ಕೃಷಿ; ತುಮಕೂರು ಜಿಲ್ಲೆಯಲ್ಲಿ ತೆಂಗು, ರಾಗಿ ಇತರೆ ಸಿರಿಧಾನ್ಯ ಆಧಾರಿತ ಸಮಗ್ರ ಕೃಷಿ ; ಕೋಲಾರ ಜಿಲ್ಲೆಯಲ್ಲಿ ಹಣ್ಣು, ತರಕಾರಿ ಹಾಗೂ ಹೈನುಗಾರಿಕೆ ಆಧಾರಿತ ಸಮಗ್ರ ಕೃಷಿ; ಹಾವೇರಿ ಜಿಲ್ಲೆಯಲ್ಲಿ ಕೃಷಿ ಬೆಳೆಗಳು ಹಾಗೂ ಬೀಜೋತ್ಪಾದನೆ ಆಧಾರಿತ ಸಮಗ್ರ ಕೃಷಿ; ಮತ್ತು ಬೆಳಗಾವಿ ಜಿಲ್ಲೆಯಲ್ಲಿ ಒಣಭೂಮಿಯಲ್ಲಿ ಹಣ್ಣು, ತರಕಾರಿ, ಜೋಳದ ಬೆಳೆ ಆಧಾರಿತ ಸಮಗ್ರ ಕೃಷಿ ಪದ್ಧತಿಗಳಿಗೆ ಆದ್ಯತೆಯನ್ನು ನೀಡಲಾಗುತ್ತದೆ.**

- ಈ ಮೂಲಕ ಆದಾಯ ಹಾಗೂ ಕಲ್ಯಾಣ ವೃದ್ಧಿಯಲ್ಲಿ **ಸಂತೃಪ್ತ ಕೃಷಿ ಬದುಕು, ವಲಸೆ ಹಾಗೂ ಆತ್ಮಹತ್ಯೆರಹಿತ ಗ್ರಾಮೀಣ ಕರ್ನಾಟಕದ** ಕನಸೊಂದು ನಮ್ಮ ಮುಂದೆ ರೂಪುಗೊಳ್ಳುವಂತಾಗಬೇಕೆನ್ನುವುದು ಕರ್ನಾಟಕ ಕೃಷಿ ಬೆಲೆ ಆಯೋಗದ ಆಶಯವಾಗಿದೆ.

## ಸರ್ಕಾರಿ ಆದೇಶ ಕೃಇ 61 ಕೃಎಇ 2013, ಬೆಂಗಳೂರು, ದಿನಾಂಕ 31.01.2014ರ ಅನ್ವಯ ರಚಿಸಲಾಗಿರುವ ಕರ್ನಾಟಕ ಕೃಷಿ ಬೆಲೆ ಆಯೋಗದ ಕಾರ್ಯಜಾಲ



ಕರ್ನಾಟಕ ಸರ್ಕಾರ

# ಕರ್ನಾಟಕ ಕೃಷಿ ಬೆಲೆ ಆಯೋಗ

(Karnataka Agriculture Price Commission)

(ಆದೇಶ ಸಂಖ್ಯೆ: ಕೃಇ61ಕೃಎಇ2013, ಬೆಂಗಳೂರು, ದಿ: 31/01/2014)

ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು 2013–14ನೇ ಸಾಲಿನ ಆಯವ್ಯಯ ಭಾಷಣದ ಪ್ರಸ್ತಾಪದನ್ವಯ, ಸರ್ಕಾರದ ಆದೇಶ ಸಂಖ್ಯೆ: ಕೃಎ61ಕೃಎಇ2013, ಬೆಂಗಳೂರು, ದಿ:31/01/2014 ರಂತೆ 10 ಷರತ್ತು ಮತ್ತು ನಿಬಂಧನೆ, 10 ಕರ್ತವ್ಯ ಹಾಗೂ ರಚನೆಗಳಂತೆ ಓರ್ವ ಅಧ್ಯಕ್ಷರು ಮತ್ತು ಐವರು ಸದಸ್ಯರಿರುವ ಕರ್ನಾಟಕ ಕೃಷಿ ಬೆಲೆ ಆಯೋಗ'ವನ್ನು ರಚಿಸಲಾಯಿತು.

**ದೃಷ್ಟಿಕೋನ:**

ರೈತರಿಗೆ ಗ್ರಾಹಕರ ಬೆಲೆಯಲ್ಲಿ ಗರಿಷ್ಟ ಪಾಲು ಖಚಿತ ಪಡಿಸುವುದು, ರಾಜ್ಯದ ಕೃಷಿ ಕ್ಷೇತ್ರದಲ್ಲಿ ಸುಸ್ಥಿರ ಅಭಿವೃದ್ಧಿ ಸಾಧನೆ, ಆಹಾರ ಭದ್ರತಾ ಅಗತ್ಯಗಳ ಪೂರೈಕೆ, ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಮತ್ತು ಸೂಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸುವುದು ಇತ್ಯಾದಿ ಕರ್ನಾಟಕ ರಾಜ್ಯದ ಕೃಷಿ ಬೆಲೆ ಆಯೋಗದ ಮುಖ್ಯ ದೃಷ್ಟಿಕೋನವಾಗಿರುತ್ತದೆ.

**ಧ್ಯೇಯೊದ್ದೇಶಗಳು:**

ಕೃಷಿ ಮಾರುಕಟ್ಟೆಯ ಮೂಲ ಸೌಕರ್ಯವನ್ನು ಉತ್ತಮಗೊಳಿಸುವುದು, ಬೆಲೆ ಮತ್ತು ಬೆಲೆಯೇತರ ಕ್ರಮಗಳಿಂದ ಮಾರುಕಟ್ಟೆ ಸ್ಥಿರೀಕರಿಸುವುದು, ಅಧಿಕ ಉತ್ಪಾದನೆ ಸಮಯದಲ್ಲಿ 'ಮಾರುಕಟ್ಟೆ ಮಧ್ಯಪ್ರವೇಶ', ರೈತರಿಗೆ ಲಾಭದಾಯಕ ಬೆಲೆ ಪಡೆಯುವುದಕ್ಕಾಗಿ ಸಾಮೂಹಿಕ ಚೌಕಾಸಿ ಸಾಮರ್ಥ್ಯ (Collective Bargaining Power) ಹೆಚ್ಚಿಸುವುದು, ಮಾರುಕಟ್ಟೆ ಸುಧಾರಣೆ, ಬೆಳೆ ವಿಮೆ, ಇ–ವ್ಯಾಪಾರಗಳ ಮೂಲಕ ಕೃಷಿ ಸಮುದಾಯದ ಎಲ್ಲಾ ವರ್ಗ ಮತ್ತು ಪ್ರದೇಶಗಳ ರೈತರ ಹಿತ ಕಾಪಾಡುವುದು ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ.

**ಕೃಷಿ ಆಯುಕ್ತರ ಕಾರ್ಯಾಲಯ ಆವರಣ**
**ಶೇಷಾದ್ರಿ ರಸ್ತೆ, ಬೆಂಗಳೂರು – 560 001**
**ಫೋನ್: 080-22115496**
**ಇ–ಮೇಲ್: agripricecommission@gmail.com**
**ಜಾಲತಾಣ: www.kapricom.org**